# ಪುರುಷರಿಗೆ ಸುವರ್ಣ ಉಪದೇಶಗಳು

ಜುಮುಅ ಖುತ್ಬ

ಹಝ್ರತ್ ಖಲೀಫತುಲ್ ಮಸೀಹ್ ಅಲ್‌ಖಾಮಿಸ್

(ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್)

# ಪುರುಷರಿಗೆ ಸುವರ್ಣ ಉಪದೇಶಗಳು

(ಪವಿತ್ರ ಖುರ್‌ಆನ್, ಹದೀಸ್ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ನಿರ್ದೇಶನಗಳ ಬೆಳಕಿನಲ್ಲಿ)


**ಖುತ್‌ಬ ಜುಮುಅ:**

ಹಝ್ರತ್ ಖ಼ಲೀಫತುಲ್ ಮಸೀಹ್ ಖ಼ಾಮಿಸ್

ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್

# ಪುರುಷರಿಗೆ ಸುವರ್ಣ ಉಪದೇಶಗಳು

(ಪವಿತ್ರ ಖುರ್ಆನ್, ಹದೀಸ್‌ಗಳು ಮತ್ತು
ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ನಿರ್ದೇಶನಗಳ ಬೆಳಕಿನಲ್ಲಿ)

*(Purusharige suvarna upadeshagalu)*

Kannada translation of

مردوں کو اہم زرّیں نصائح

**Mardon ko eham zarreen nasaih** (urdu)

Friday Sermon delivered on 19/05/2017 by:
Hazrat Mirza Masroor Ahmad
Imam and the Head of the Worldwide Ahmadiyya Muslim Jama'at,
Khalifatul Masih V



| | |
|---|---|
| Translated by : | Moulavi Inamullah |
| Type Setting : | Inamullah Mangaluru |
| Published by : | Nazarat Nashro - Isha'at, Qadian, Distt. Gurdaspur, Punjab -143516 |
| First Edition : | 2018 |
| Copies: | 1000 |
| Printed at : | Fazl-e-Umar Printing Press, Qadian |

بِسۡمِ اللّٰہِ الرَّحۡمٰنِ الرَّحِیۡمِ

# ಪುರುಷರಿಗೆ ಅತ್ಯಂತ ಮುಖ್ಯವಾದ ನಿರ್ದೇಶನಗಳು

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅಲ್ಲಾಹನು ಅವತೀರ್ಣಗೊಳಿಸಿದ ಇಸ್ಲಾಮಿನ ಉಪದೇಶಗಳು ನಮ್ಮ ಪ್ರತಿಯೊಂದು ವ್ಯವಹಾರಗಳಲ್ಲಿ ಮಾರ್ಗದರ್ಶನ ನೀಡುತ್ತವೆ. ನಮ್ಮ ಪೈಕಿ ಪ್ರತಿಯೊಬ್ಬನು ಈ ಉಪದೇಶಗಳ ಪ್ರಕಾರ ನಡೆಯುವನಾದರೆ ಒಂದು ಸುಂದರವಾದ ಸಮಾಜ ಸ್ಥಾಪಿತವಾಗಬಹುದಾಗಿದೆ.

ಪುರುಷನಿಗೆ ಮನೆಯ ಯಜಮಾನ ಎಂಬ ನೆಲೆಯಲ್ಲಿಯೂ ಹೊಣೆಗಾರಿಕೆ ಗಳಿವೆ. ಪತಿ ಎಂಬ ನೆಲೆಯಲ್ಲಿಯೂ ಹೊಣೆಗಾರಿಕೆಗಳಿವೆ. ಪಿತನೆಂಬ ನೆಲೆಯಲ್ಲೂ ಪುತ್ರನೆಂಬ ನೆಲೆಯಲ್ಲಿಯೂ ಹೊಣೆಗಾರಿಕೆಗಳಿವೆ. ಪ್ರತಿಯೊಬ್ಬ ಪುರುಷ ಈ ಹೊಣೆಗಾರಿಕೆಗಳನ್ನು ಮನವರಿಕೆ ಮಾಡಿಕೊಂಡು ಅವುಗಳನ್ನು ಈಡೇರಿಸಲು ಪ್ರಯತ್ನ ಮಾಡುವನಾದರೆ ಸಮಾಜದಲ್ಲಿ ಶಾಂತಿ, ಪ್ರೀತಿ ಮತ್ತು ಸಹೋದರತೆ ಸ್ಥಾಪಿತವಾಗುವುದು. ಇವುಗಳೇ ಮಕ್ಕಳ ತರಬೇತಿಯ ಮಾರ್ಗವಾಗಿ ಶಾಂತಿದಾಯಕ ಮತ್ತು ಮಾನವ ಹಕ್ಕುಗಳನ್ನು ಸ್ಥಾಪಿಸುವ ಪೀಳಿಗೆಯನ್ನು ಸೃಷ್ಟಿಸುವುದು. ಮನೆಯ ನೆಮ್ಮದಿಯೂ ಇವುಗಳಿಂದಲೇ ಉಂಟಾಗುವುದು.

(ಪವಿತ್ರ ಖುರ್‌ಆನ್, ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನುಡಿಮುತ್ತುಗಳು ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ನಿರ್ದೇಶನಗಳ ಹಾಗೂ ಜೀವಿತ ಮಾದರಿಯ ಬೆಳಕಿನಲ್ಲಿ ಪುರುಷರಿಗೆ ಅತ್ಯಂತ ಮುಖ್ಯವಾದ ಸುವರ್ಣ ಉಪದೇಶಗಳು.)

ಹಝ್‌ರತ್ ಖ಼ಲೀಫತುಲ್ ಮಸೀಹ್ ಖ಼ಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝ್ಹ಼ೀಝ್ ಲಂಡನಿನ 'ಬೈತುಲ್ ಫುತೂಹ್' ಮಸೀದಿಯಲ್ಲಿ 19/05/2017ರಂದು ನೀಡಿದ ಜುಮುಅ ಖುತ್‌ಬ.

اَشْهَدُ اَنْ لَّا اِلٰهَ اِلَّا اللّٰهُ وَحْدَهٗ لَا شَرِيْكَ لَهٗ وَ اَشْهَدُ اَنَّ مُحَمَّدًا عَبْدُهٗ وَرَسُوْلُهٗ-

اَمَّا بَعْدُ فَاَعُوْذُ بِاللّٰهِ مِنَ الشَّيْطٰنِ الرَّجِيْمِ- بِسْمِ اللّٰهِ الرَّحْمٰنِ الرَّحِيْمِ [١:١]

اَلْحَمْدُ لِلّٰهِ رَبِّ الْعَالَمِيْنَ [١:٢] اَلرَّحْمٰنِ الرَّحِيْمِ [١:٣] مَالِكِ يَوْمِ الدِّيْنِ [١:٤] إِيَّاكَ نَعْبُدُ وَإِيَّاكَ نَسْتَعِيْنُ [١:٥] اِهْدِنَا الصِّرَاطَ الْمُسْتَقِيْمَ [١:٦] صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ [١:٧]

ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅಲ್ಲಾಹನು ಅವತೀರ್ಣಗೊಳಿಸಿದ ಇಸ್ಲಾಮಿನ ಉಪದೇಶಗಳು ನಮ್ಮ ಪ್ರತಿಯೊಂದು ವ್ಯವಹಾರಗಳಲ್ಲಿ ಮಾರ್ಗದರ್ಶನ ನೀಡುತ್ತವೆ. ನಮ್ಮ ಪೈಕಿ ಪ್ರತಿಯೊಬ್ಬನು ಈ ಉಪದೇಶಗಳ ಪ್ರಕಾರ ನಡೆಯುವನಾದರೆ ಒಂದು ಸುಂದರವಾದ ಸಮಾಜ ಸ್ಥಾಪಿತವಾಗಬಹುದಾಗಿದೆ. ಇಸ್ಲಾಮಿನ ಪಾಠಗಳ ಪ್ರಕಾರ ಮುಸ್ಲಿಮರು ನಡೆದಿದ್ದರೆ, ಇಂದು ಮುಸ್ಲಿಮೇತರರು ಇಸ್ಲಾಮಿನ ಮೇಲೆ ಮತ್ತು ಮುಸ್ಲಿಮರ ನಡವಳಿಕೆಗಳ ಬಗ್ಗೆ ಆಕ್ಷೇಪವೆತ್ತುವುದಕ್ಕೆ ಬದಲಾಗಿ ಮುಸ್ಲಿಮರ ಉತ್ತಮ ಮಾದರಿಗಳನ್ನು ನೋಡಿ ಇಸ್ಲಾಮಿನ ಅನುಯಾಯಿಗಳಾಗುತ್ತಿದ್ದರು. ಪವಿತ್ರ ಖುರ್‌ಆನಿನಲ್ಲಿ ಅಸಂಖ್ಯಾತ ಆಜ್ಞೆಗಳಿವೆ. ಈ ಎಲ್ಲವನ್ನೂ ಅಲ್ಲಾಹನು ಒಂದು ವಾಕ್ಯದಲ್ಲಿ ಜಮಾಯಿಸಿ ಹೀಗೆ ಹೇಳಿರುವನು:

لَقَدْ كَانَ لَكُمْ فِيْ رَسُوْلِ اللّٰهِ أُسْوَةٌ حَسَنَةٌ

**ಲಖದ್ ಕಾನ ಲಕುಮ್ ಫೀ ರಸೂಲಿಲ್ಲಾಹಿ ಉಸ್‌ವತುನ್ ಹಸನ.**

ನಿಶ್ಚಯವಾಗಿಯೂ ನಿಮಗೆ ಅಲ್ಲಾಹನ

ಸಂದೇಶವಾಹಕರಲ್ಲಿ ಉತ್ತಮವಾದ ಮಾದರಿ ಇದೆ.

ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೀವಿತವು ಮನೆಯಿಂದ ಪ್ರಾರಂಭಿಸಿ ಸಮಾಜದ ತನಕ ಪವಿತ್ರ ಖುರ್‌ಆನಿನ ಎಲ್ಲ ಆಜ್ಞೆಗಳನ್ನು ಪಾಲಿಸುವ ರೀತಿಯಲ್ಲಿತ್ತು. ದುರದೃಷ್ಟವಶಾತ್ ಮುಸ್ಲಿಮರಲ್ಲಿ

ಬಹುತೇಕರು ಅಲ್ಲಾಹನ ಈ ಆಜ್ಞೆಯನ್ನು ಓದುತ್ತಾರೆ ಮತ್ತು ಬಹಳ ಗೌರವಭಾವದಿಂದ ಕಾಣುತ್ತಾರೆ. ಆದರೆ ಅದರಂತೆ ನಡೆಯುವ ಸಂದರ್ಭ ಬರುವಾಗ ಅದನ್ನು ಕಡೆಗಣಿಸುತ್ತಾರೆ. ನಮ್ಮ ಎಲ್ಲ ವಿಷಯಗಳಲ್ಲಿಯೂ ಈ ಉತ್ತಮ ಮಾದರಿಯನ್ನು ನಮ್ಮ ಮುಂದೆ ಇರಿಸುವಾಗ ಮಾತ್ರ ನಮಗೆ ಯಥಾರ್ಥ ವಿಜಯ ಲಭಿಸುವುದು. ಕೆಲವು ಬಾರಿ ಮನುಷ್ಯನು ದೊಡ್ಡ ದೊಡ್ಡ ವ್ಯವಹಾರಗಳಲ್ಲಿ ಬಹಳ ಉತ್ತಮವಾದ ಮಾದರಿಯನ್ನು ತೋರಿಸುತ್ತಾನೆ, ಆದರೆ ಪ್ರತ್ಯಕ್ಷದಲ್ಲಿ ಚಿಕ್ಕದೆಂದು ತೋರುವ ವಿಷಯಗಳಿಗೆ ಯಾವುದೇ ಮಹತ್ವವಿಲ್ಲವೆಂಬಂತೆ ಕಡೆಗಣಿಸುತ್ತಾರೆ. ಸತ್ಯದಲ್ಲಿ ಈ ವಿಷಯಗಳ ಕಡೆಗೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ನಮ್ಮ ಬಹಳ ಗಮನಸೆಳೆದಿದ್ದಾರೆ ಮತ್ತು ಅದರ ಬಗ್ಗೆ ತಮ್ಮ ಮಾದರಿಯನ್ನು ಮುಂದಿರಿಸಿದ್ದಾರೆ.

ನಾವು ನಮ್ಮ ಜೀವಿತವನ್ನು ನೆಮ್ಮದಿಯಿಂದ ಕೂಡಿರುವುದನ್ನಾಗಿ ಮಾಡಲು ಬಯಸುವವರಾದರೆ ಮತ್ತು ಅಲ್ಲಾಹನ ಅನುಗ್ರಹ ಗಳಿಸಲು ಬಯಸುವವರಾದರೆ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪ್ರತಿಯೊಂದು ವ್ಯವಹಾರದಲ್ಲಿ ತಮ್ಮ ಸ್ವಭಾವಗುಣಗಳನ್ನು ಪ್ರಕಟಿಸಿದ ರೀತಿಯಲ್ಲಿ ಮತ್ತು ಈ ಕಾಲಘಟ್ಟದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧನಾದ ಗುಲಾಮರಾಗಿ ಆಗಮಿಸಿದ ಹಝ್ರತ್ ವಾಗ್ದತ್ತ ಮಸೀಹ್ ಅಲೈಹಿಸ್ಸಲಾಮರು ಅವುಗಳನ್ನು ನಮಗೆ ವಿವರಿಸಿಕೊಟ್ಟ ರೀತಿಯಲ್ಲಿ ಅವುಗಳನ್ನು ನಮ್ಮ ಜೀವಿತದ ಭಾಗವನ್ನಾಗಿ ಮಾಡಬೇಕಾಗಿದೆ.

## ವಿವಿಧ ನೆಲೆಗಳಲ್ಲಿ ಪುರುಷರಿಗಿರುವ ಹೊಣೆಗಾರಿಕೆಗಳು

ಇದಕ್ಕೆ ಸಂಬಂಧಿಸಿ ಇಂದು ನಾನು ಪುರುಷರಿಗೆ ವಿವಿಧ ನೆಲೆಗಳಲ್ಲಿ ಅವರಿಗೆ ಇರುವ ಹೊಣೆಗಾರಿಕೆಗಳನ್ನು ವಿವರಿಸುವೆನು. ಪುರುಷನಿಗೆ ಮನೆಯ ಯಜಮಾನ ಎಂಬ ನೆಲೆಯಲ್ಲಿಯೂ ಹೊಣೆಗಾರಿಕೆಗಳಿವೆ. ಪತಿ ಎಂಬ ನೆಲೆಯಲ್ಲಿಯೂ ಹೊಣೆಗಾರಿಕೆಗಳಿವೆ. ಪಿತನೆಂಬ ನೆಲೆಯಲ್ಲೂ ಪುತ್ರನೆಂಬ ನೆಲೆಯಲ್ಲಿಯೂ ಹೊಣೆಗಾರಿಕೆಗಳಿವೆ. ಪ್ರತಿಯೊಬ್ಬ ಪುರುಷ ಈ ಹೊಣೆಗಾರಿಕೆಗಳನ್ನು ಮನವರಿಕೆ ಮಾಡಿಕೊಂಡು ಅವುಗಳನ್ನು ಈಡೇರಿಸಲು ಪ್ರಯತ್ನ ಮಾಡುವವನಾದರೆ ಸಮಾಜದಲ್ಲಿ ಶಾಂತಿ, ಪ್ರೀತಿ ಸಹೋದರತೆ

ಸ್ಥಾಪಿತವಾಗುವುದು. ಇವುಗಳೇ ಮಕ್ಕಳ ತರಬೇತಿಯ ಮಾರ್ಗವಾಗಿ ಶಾಂತಿದಾಯಕ ಮತ್ತು ಮಾನವ ಹಕ್ಕುಗಳನ್ನು ಸ್ಥಾಪಿಸುವ ಪೀಳಿಗೆಯನ್ನು ಸೃಷ್ಟಿಸುವುವು. ಮನೆಯ ನೆಮ್ಮದಿಯೂ ಇವುಗಳಿಂದಲೇ ಉಂಟಾಗುವುದು.

ಇಂದು ಅನೇಕ ಮನೆಗಳಿಂದ ದೂರುಗಳು ಬರುತ್ತವೆ. ಪುರುಷ ಮನೆಯ ಯಜಮಾನನೆಂಬ ಕಾರಣದಿಂದ ತನ್ನ ದೊಡ್ಡಸ್ತಿಕೆಯನ್ನು ತೋರಿಸಿ, ಅಧಿಕಾರಗಳೆಲ್ಲವೂ ತನಗಿದೆ ಎಂದು ಭಾವಿಸಿ ತನ್ನ ಪತ್ನಿಯನ್ನು ಗೌರವಿಸುತ್ತಿಲ್ಲ ಎಂದು ಮಾತ್ರವಲ್ಲ, ಆಕೆಗೆ ಸಲ್ಲಬೇಕಾದ ಹಕ್ಕುಗಳನ್ನು ಕೂಡ ನೀಡುತ್ತಿಲ್ಲ. ಮಕ್ಕಳ ತರಬೇತಿಗೆ ಸಂಬಂಧಿಸಿದ ಹೊಣೆಗಾರಿಕೆಗಳನ್ನು ನಿಭಾಯಿಸುತ್ತಿಲ್ಲ. ಕೇವಲ ನಾಮ ಮಾತ್ರದ ಮಾಲಿಕನಾಗಿ ಕುಳಿತ್ತಿದ್ದಾನೆ. ಪುರುಷರು ಪತ್ನಿಯರನ್ನು ಹೊಡೆದು ಬಡಿದು ರಕ್ತ ಹೆಪ್ಪುಗಟ್ಟುವಂತೆ ಮಾಡುತ್ತಾರೆ ಅಥವಾ ಗಾಯಗೊಳಿಸುತ್ತಾರೆ ಎಂಬ ದೂರುಗಳು ಭಾರತದಿಂದಲೂ ಪಾಕಿಸ್ತಾನದಿಂದಲೂ ಬರುತ್ತಿರುತ್ತವೆ. ಕೆಲವರು ಈ ಪಾಶ್ಚತ್ಯ ದೇಶದಲ್ಲಿ ಇದ್ದುಕೊಂಡು ಹೀಗೆ ವರ್ತಿಸುತ್ತಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಿದ ನಂತರವೂ ಮೂಢ ಜನರ ಹಾಗೆ ಜೀವಿಸುವುದಾದರೆ, ಧರ್ಮದ ಯಾವುದೇ ಅರಿವಿಲ್ಲದ ಕೆಲವು ಮುಸ್ಲಿಮರಂತೆ ಇರಬೇಕಾದರೆ, ತಿಳಿಗೇಡಿಗಳಂತೆ ತಮ್ಮ ಪತ್ನಿ – ಮಕ್ಕಳೊಂದಿಗೆ ವರ್ತಿಸುವುದಾದರೆ, ತಮ್ಮ ಸ್ಥಿತಿಯನ್ನು ಬದಲಾಯಿಸುವುದಾಗಿ ಪ್ರತಿಜ್ಞೆ ಮಾಡಿ ಬೈಅತ್ ಮಾಡಿದುದರ ಯಾವ ಪ್ರಯೋಜನವೂ ಸಿಗಲಾರದು.

ಅಲ್ಲಾಹನಿಗೆ ಸಂಬಂಧಿಸಿದ ಕರ್ತವ್ಯಗಳನ್ನು, ಕರ್ಮಪರವಾದ ಮಟ್ಟವನ್ನು ಉನ್ನತಗೊಳಿಸುವುದಕ್ಕೆ ಸಂಬಂಧಿಸಿದ ಕರ್ತವ್ಯಗಳನ್ನು ಪುರುಷರು ಈಡೇರಿಸುತ್ತಿದ್ದಾರೆಯೇ? ಪುರುಷರು ಈ ಕರ್ತವ್ಯಗಳನ್ನು ಈಡೇರಿಸುವವರಾದರೆ ಅವರ ಮನೆಯಲ್ಲಿ ದೌರ್ಜನ್ಯ ಉಂಟಾಗಲು ಸಾಧ್ಯವೇ ಇಲ್ಲ.

## ಪತ್ನಿಯರೊಂದಿಗೆ ಸದ್ವರ್ತನೆ

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮನೆಯ ಯಜಮಾನ ಎಂಬ ನೆಲೆಯಲ್ಲಿ ದೇವನ ಏಕತ್ವ ಸ್ಥಾಪನೆಯ ಮಹತ್ವವನ್ನು ತಮ್ಮ ಪತ್ನಿ ಮತ್ತು ಮಕ್ಕಳಿಗೆ ಸ್ಪಷ್ಟಪಡಿಸಿ ಅದರ ಪ್ರಕಾರ

ನಡೆಯುವಂತೆ ಮಾಡಿದರು. ಆದರೆ ಈ ಕೆಲಸವನ್ನು ಸಹ ಪ್ರೀತಿಯಿಂದಲೂ ವಾತ್ಸಲ್ಯದಿಂದಲೂ ಮಾಡಿಸಿದರು. ದಂಡ ಪ್ರಯೋಗದಿಂದಲ್ಲ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಲೋಕದ ಸುಧಾರಣೆ ಮತ್ತು ಶರೀಅತ್ ಸ್ಥಾಪನೆಯ ಕೆಲಸದಲ್ಲಿ ಪೂರ್ಣವಾಗಿ ನಿರತರಾಗಿದ್ದರೂ ತಮ್ಮ ಕುಟುಂಬದ ಹಕ್ಕುಗಳನ್ನು ಪ್ರೀತಿಯಿಂದಲೂ ವಾತ್ಸಲ್ಯದಿಂದಲೂ ಈಡೇರಿಸಿದರು. ಪ್ರಥಮ ಹೊಣೆಗಾರಿಕೆ ತೌಹೀದ್ ಸ್ಥಾಪನೆ ಮತ್ತು ಅಲ್ಲಾಹನ ಆರಾಧನೆ ಎಂದು ಅವರಿಗೆ ಮನದಟ್ಟು ಮಾಡಿಕೊಟ್ಟರು. ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾ ಹೇಳುತ್ತಾರೆ:

> ಪ್ರವಾದಿವರ್ಯರು ರಾತ್ರಿ ನಫ್ಲ್ ನಮಾಝ್ ನಿರ್ವಹಿಸಲು ಎದ್ದೇಳುತ್ತಿದ್ದರು. ಅನಂತರ ಸುಬ್‌ಹ್ ನಮಾಝಿಗೆ ಸ್ವಲ್ಪ ಮೊದಲು ನೀರು ಚಿಮುಕಿಸಿ ನಮ್ಮನ್ನು ಎಬ್ಬಿಸಿ ನಫ್ಲ್ ನಮಾಝ್ ಅನುಷ್ಠಿಸಲು, ಅಲ್ಲಾಹನ ಆರಾಧನೆ ಮಾಡಲು ಮತ್ತು ಅವನಿಗೆ ಸಲ್ಲಬೇಕಾದ ಹಕ್ಕುಗಳನ್ನು ಈಡೇರಿಸಲು ಹೇಳುತ್ತಿದ್ದರು.

**(ಸಹೀಹ್ ಬುಖಾರಿ; ಕಿತಾಬುಲ್ ವಿತ್‌ರ್)**

ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ತಮ್ಮ ಕುಟುಂಬಕ್ಕೆ ಸಲ್ಲಬೇಕಾದ ಹಕ್ಕುಗಳನ್ನು ಹೇಗೆ ಈಡೇರಿಸುತ್ತಿದ್ದರು ಎಂದು ನೋಡಿರಿ. ಪತ್ನಿಯರು ಮಾಡಬೇಕಾದ ಕೆಲಸಗಳಲ್ಲಿಯೂ ಸಹಕರಿಸುತ್ತಿದ್ದರು. ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾ ಹೇಳುತ್ತಾರೆ:

> ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮನೆಯಲ್ಲಿ ಇರುವಷ್ಟು ಸಮಯ ಮನೆಯವರ ಸೇವೆ ಮತ್ತು ಸಹಾಯದಲ್ಲಿ ನಿರತರಾಗುತ್ತಿದ್ದರು. ನಮಾಝಿಗೆ ಮಸೀದಿಯಿಂದ ಕರೆಯಲ್ಪಡುವಾಗ ಮಸೀದಿಗೆ ಹೋಗುತ್ತಿದ್ದರು.

**(ಸಹೀಹ್ ಬುಖಾರಿ; ಕಿತಾಬುಲ್ ಅಝಾನ್, ಬಾಬ್ ಮನ್‌ಕಾನ ಫೀ ಹಾಜತಿ ಅಹ್‌ಲಿಹಿ)**

ನಾವು ನಮ್ಮಲ್ಲಿ ಅಳವಡಿಸಬೇಕಾದ ಮಾದರಿ ಇದಾಗಿದೆ. ದೌರ್ಜನ್ಯಕ್ಕೆ ಸಮಾನವಾದ ರೀತಿಯಲ್ಲಿ ವರ್ತಿಸುವುದಲ್ಲ.

ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾ ಹಝ್ರತ್

ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮನೆಗೆಲಸಗಳ ಬಗ್ಗೆ ಹೀಗೆ ಹೇಳುತ್ತಾರೆ: ಪ್ರವಾದಿವರ್ಯರು ತಮ್ಮ ಬಟ್ಟೆ ಸ್ವತಃ ಹೊಲಿಯುತ್ತಿದ್ದರು. ಪಾದರಕ್ಷೆಗೆ ಸಹ ಸ್ವತಃ ಹೊಲಿಗೆ ಹಾಕುತ್ತಿದ್ದರು. ಮನೆಯ ನೀರಿನ ಡೋಲು ಮೊದಲಾದವುಗಳನ್ನು ದುರಸ್ತಿ ಮಾಡುತ್ತಿದ್ದರು.

**(ಉಮ್ದತುಲ್ ಖಾರಿ, ಶರಹ್ ಸಹೀಹ್ ಬುಖಾರಿ;**

**ಕಿತಾಬು ಮವಾಖೀತುಸ್ಸಲಾತ್, ಬಾಬ್ ಮನ್‌ಕಾನ ಫೀ ಹಾಜತಿ ಅಹ್‌ಲಿಹಿ)**

ಒಟ್ಟಿನಲ್ಲಿ, ಈ ಮಾದರಿಗಳನ್ನು ಮುಂದಿರಿಸುತ್ತಾ ಗಂಡಂದಿರು ತಮ್ಮನ್ನು ಪರಿಶೋಧಿಸಬೇಕು. ತಮ್ಮ ಮನೆಗಳಲ್ಲಿ ಈ ರೀತಿಯಲ್ಲಿ ನಡೆಯಲಾಗುತ್ತಿದೆಯೇ ಎಂದು ಶ್ರದ್ಧೆವಹಿಸಿ ನೋಡಬೇಕಾಗಿದೆ.

ಗಂಡಂದಿರ ಕರ್ತವ್ಯ ಮತ್ತು ವರ್ತನೆಯ ಮಟ್ಟದ ಬಗ್ಗೆ ಒಂದು ಸಂದರ್ಭದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಹಾಬಿಯರ್ಯರಿಗೆ ಹೇಳಿದ್ದನ್ನು ಹಝ್ರತ್ ಅಬೂಹುರೈರಾ(ರ) ಹೀಗೆ ವರದಿ ಮಾಡುತ್ತಾರೆ:

ಸತ್ಯವಿಶ್ವಾಸಿಗಳಲ್ಲಿ ಪರಿಪೂರ್ಣ ವಿಶ್ವಾಸಿಗಳಾದವರು ತಮ್ಮ ಸ್ವಭಾವ ಗುಣಗಳಲ್ಲಿ ಉತ್ತಮರಾಗಿರುತ್ತಾರೆ. ನಿಮ್ಮ ಪೈಕಿ ಉತ್ತಮ ಸ್ವಭಾವದವರು ತಮ್ಮ ಪತ್ನಿಯರೊಂದಿಗೆ ಉತ್ತಮವಾಗಿ ವರ್ತಿಸುವವರಾಗಿದ್ದಾರೆ.

**(ಸುನನ್ ತಿರ್ಮಿಧಿ; ಅಬ್‌ವಾಬುರ್ರಿಝಾಅ್,**

**ಬಾಬು ಮಾಜಾಅ ಫಿಲ್ ಹಕ್ಕಿಲ್ ಮರ್‌ಅತಿ ಅಲಾ ಝೌಜಿಹಾ – ಹದೀಸ್: 1162)**

ಆದುದರಿಂದ ತನ್ನ ಪತ್ನಿಯೊಂದಿಗೆ ಉತ್ತಮವಾಗಿ ವರ್ತಿಸದ ಪ್ರತಿಯೊಬ್ಬನು ತನ್ನನ್ನು ಪರಿಶೋಧಿಸಬೇಕು. ಪತ್ನಿಯರೊಂದಿಗೆ ನಿಜವಾಗಿಯೂ ಉತ್ತಮವಾಗಿ ವರ್ತಿಸುವುದು ಉನ್ನತವಾದ ಸತ್ಯವಿಶ್ವಾಸದ ಚಿಹ್ನೆಯಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪತಿಯ ಹೊಣೆಗಾರಿಕೆಗಳು ಮತ್ತು ಪತ್ನಿಯೊಂದಿಗೆ ಉತ್ತಮವಾಗಿ ವರ್ತಿಸುವ ಬಗ್ಗೆ ಹೀಗೆ ಹೇಳುತ್ತಾರೆ:

"ಅಶ್ಲೀಲ ಕೃತ್ಯಗಳ ಹೊರತು ಪತ್ನಿಯ ಎಲ್ಲ ಕೆಟ್ಟ ಸ್ವಭಾವಗಳನ್ನು ಮತ್ತು ಕಹಿ ಅನುಭವಗಳನ್ನು ಸಹಿಸಿಕೊಳ್ಳಬೇಕು. ಪುರುಷನಾಗಿ ಮಹಿಳೆಯೊಂದಿಗೆ

ಯುದ್ಧ ಮಾಡುವುದು ತುಂಬಾ ನಾಚಿಕೆಯ ಸಂಗತಿಯಾಗಿದೆ. ನಮ್ಮನ್ನು ಪುರುಷರನ್ನಾಗಿ ಮಾಡಿದಕ್ಕೆ ಕೃತಜ್ಞತೆ ಎಂಬಂತೆ ಸ್ತ್ರೀಗಳೊಂದಿಗೆ ಮೃದುವಾಗಿ ಮತ್ತು ವಾತ್ಸಲ್ಯದಿಂದ ವರ್ತಿಸಬೇಕು."

ಒಬ್ಬ ಸಹೋದರ ತನ್ನ ಪತ್ನಿಯೊಂದಿಗೆ ಬಹಳ ಕಠಿಣವಾಗಿ ವರ್ತಿಸುವುದರ ಪ್ರಸ್ತಾಪ ಒಂದು ಸಂದರ್ಭದಲ್ಲಿ ಆಯಿತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಈ ವಾರ್ತೆಯಿಂದ ತುಂಬಾ ದುಃಖಿತರಾದರು. "ನಮ್ಮ ಪ್ರಿಯ ಸಹೋದರರು ಹೀಗೆ ಆಗಬಾರದು" ಎಂದು ಹೇಳಿದರು. ಅನಂತರ ಬಹಳ ಹೊತ್ತಿನ ವರೆಗೆ ಪತ್ನಿಯರೊಂದಿಗೆ ವರ್ತಿಸಬೇಕಾದ ರೀತಿಯ ಬಗ್ಗೆ ಉಪದೇಶಿಸಿದರು. ಕೊನೆಗೆ ಹೀಗೆ ಹೇಳಿದರು:

"ನನ್ನ ಸ್ಥಿತಿ ಏನೆಂದರೆ, ಒಂದು ಸಲ ನಾನು ಪತ್ನಿಯೊಂದಿಗೆ ಜೋರಾಗಿ ಮಾತನಾಡಿದೆ. ಅದು ದುಃಖದಿಂದ ಕೂಡಿದ್ದಾಗಿತ್ತು. ಆದರೆ ಅದರಲ್ಲಿ ಮನನೋಯಿಸುವ ಅಥವಾ ಕಠಿಣವಾದ ಪದಗಳಿರಲಿಲ್ಲ. ಪತ್ನಿಯೊಂದಿಗೆ ಹೀಗೆ ಮಾತನಾಡಲು ಕಾರಣ ಯಾವುದಾದರೂ ಗೋಪ್ಯವಾದ ಪಾಪವಾಗಿರಬಹುದು ಎಂದು ಯೋಚಿಸಿ ನಾನು ಬಹಳ ಸಮಯ ಇಸ್ತಿಗ್‌ಫಾರ್ ಮಾಡಿದೆ ಮತ್ತು ವಿನಮ್ರತೆಯಿಂದ ನಫ್ಲ್ ನಮಾಝುನ್ನು ಅನುಷ್ಠಿಸಿದೆ ಹಾಗು ದಾನಧರ್ಮ ಮಾಡಿದೆ.

**(ಮಲ್‌ಫೂಝಾತ್‌ನಿಂದ ಉಲ್ಲೇಖಿತ, ಭಾಗ 2)**

ಒಟ್ಟಿನಲ್ಲಿ, ಇದಾಗಿದೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮಾದರಿ. ಒಬ್ಬ ಸಹೋದರನು ತನ್ನ ಪತ್ನಿಯೊಂದಿಗೆ ಕಠಿಣವಾಗಿ ವರ್ತಿಸಿದಕ್ಕೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತಮ್ಮ ದುಃಖ ಮತ್ತು ನೋವನ್ನು ವ್ಯಕ್ತಪಡಿಸಿದರು ಎಂದು ಮಾತ್ರವಲ್ಲ ಹೀಗೆ ಉಪದೇಶವನ್ನು ಸಹ ನೀಡಿದರು: "ಚಿಕ್ಕ ಪುಟ್ಟ ವಿಷಯಗಳಿಗೆ ಸಂಬಂಧಿಸಿ ಪತ್ನಿಯರೊಂದಿಗೆ ಜಗಳ ಮಾಡುವ ಮತ್ತು ಹೊಡೆಯಲು ಕೈ ಎತ್ತುವ ಪತಿಯಂದಿರು ಜಾಗ್ರತೆವಹಿಸಬೇಕಾಗಿದೆ." ಕೆಲವರು ಕೈ ಎತ್ತುವುದು ಮಾತ್ರವಲ್ಲ ಗಾಯಗೊಳಿಸುವುದರಿಂದಲೂ ಹಿಂಜರಿಯುವುದಿಲ್ಲ. ಅವರಿಗೆ ಇದು ಬಹಳ ಚಿಂತಿಸಬೇಕಾದ ವಿಷಯವಾಗಿದೆ. ಹಝ್ರತ್ ಪೈಗಂಬರ್

ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪ್ರಕಾರ ಇಂಥವರ ವಿಶ್ವಾಸವೂ ಪರಿಪೂರ್ಣವಲ್ಲ. ಇಂಥವರು ತಮ್ಮ ವಿಶ್ವಾಸದ ಬಗ್ಗೆ ಚಿಂತಿಸಬೇಕಾಗಿದೆ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಈ ಉಪದೇಶಗಳ ಕಾರಣದಿಂದಲೇ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಈ ಬಗ್ಗೆ ಚಿಂತಿತರಾಗಿದ್ದರು. ಈ ಉನ್ನತ ಮಟ್ಟದ ವಿಶ್ವಾಸವನ್ನು ಹೊಂದಿರದವರು ಹಲವು ಸ್ಥಳಗಳಲ್ಲಿ ಎಡವಿ ಬೀಳಬಹುದು ಎಂಬ ಚಿಂತೆ ಅವರಿಗೆ ಇತ್ತು.

ಇದು ನಾನು ಹೇಳಿದ ಹಾಗೆ ಬಾಹ್ಯವಾಗಿ ಚಿಕ್ಕದೆಂದು ಕಾಣಿಸುವ ವಿಷಯಗಳಾಗಿವೆ. ಆದರೆ ಇದು ಚಿಕ್ಕ ವಿಷಯವೇನೂ ಅಲ್ಲ. ಈ ರಾಜ್ಯಗಳಲ್ಲಿ ಇಂತಹ ವಿಷಯಗಳು ಪೊಲೀಸ್ ತನಕ ತಲುಪಿ ಜಮಾಅತಿಗೆ ಕಳಂಕ ಉಂಟುಮಾಡುತ್ತವೆ. ಇಂತಹ ಜನರು ಲೌಕಿಕವಾದ ಶಿಕ್ಷೆಯನ್ನು ಅನುಭವಿಸುತ್ತಾರೆ ಹಾಗು ಅಲ್ಲಾಹನ ಕೋಪಕ್ಕೂ ಗುರಿಯಾಗುತ್ತಾರೆ.

ಪತ್ನಿಯರಲ್ಲಿ ಇರುವ ಕೆಲವು ಕೆಡುಕುಗಳ ಕಾರಣದಿಂದ ನಾವು ಕಠಿಣವಾಗಿ ವರ್ತಿಸಬೇಕಾಗುತ್ತದೆ ಎಂದು ಕೆಲವು ಪುರುಷರು ಹೇಳುತ್ತಾರೆ. ಆದರೆ ಧರ್ಮದ ನೈತಿಕ ಮಟ್ಟವನ್ನು ಪೂರ್ಣವಾಗಿ ಈ ಪತಿಯಂದಿರು ತಲಪಿದ್ದಾರೆಯೇ ಎಂದು ಸ್ವತಃ ಆತ್ಮಪರಿಶೋಧನೆ ನಡೆಸಲಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇಂತಹ ಪುರುಷರನ್ನು ಉಪದೇಶಿಸುತ್ತಾ ಹೇಳುತ್ತಾರೆ:

"ಪುರುಷನು ಸಾತ್ವಿಕನಲ್ಲವಾದರೆ ಅವನ ಪತ್ನಿ ಸಾತ್ವಿಕಳಾಗಲು ಹೇಗೆ ತಾನೆ ಸಾಧ್ಯ? ಪತಿ ಸಾತ್ವಿಕನಾಗುವಾಗ ಪತ್ನಿ ಸಹ ಸಾತ್ವಿಕಳಾಗುವಳು. ನೀವು ಕೇವಲ ಮಾತಿನಿಂದ ಪತ್ನಿಗೆ ಉಪದೇಶ ನೀಡಬೇಡಿರಿ. ಕೃತ್ಯರೂಪದಲ್ಲಿ ನೀವು ಉಪದೇಶ ನೀಡಿದರೆ ಅದರ ಪ್ರಭಾವ ಉಂಟಾಗುತ್ತದೆ." (ನಿಮ್ಮ ಪ್ರತಿ ಹೆಜ್ಜೆ ಅಲ್ಲಾಹನ ಆಜ್ಞೆಯ ಪ್ರಕಾರವಾಗಿದೆ ಎಂದು ನಿಮ್ಮ ಕೃತ್ಯಗಳಿಂದ ಸಾಬೀತುಗೊಳಿಸಬೇಕು.) "ಪತಿಗಿರುವ ಕೊರತೆ ಅಥವಾ ವಕ್ರತೆಗೆ ಯಾವಾಗಲೂ ಪತ್ನಿ ಸಾಕ್ಷಿಯಾಗಿರುತ್ತಾಳೆ. ಒಬ್ಬನು ಅಲ್ಲಾಹನಿಗೆ ಭಯಪಡುವುದಿಲ್ಲವಾದರೆ ಅವನ ಪತ್ನಿ ಅವನನ್ನು ಭಯಪಡುವುದಾದರೂ ಹೇಗೆ? ಮೌಲವಿಯರ ಅಥವಾ ಪತಿಯರ ಇಂತಹ ಉಪದೇಶಗಳಿಗೆ ಯಾವುದೇ ಪ್ರಭಾವವಿರುವುದಿಲ್ಲ. ಯಾವಾಗಲೂ ಕೃತ್ಯರೂಪದ

ಮಾದರಿ ಪ್ರಭಾವ ಬೀರುತ್ತದೆ. ಪತಿ ರಾತ್ರಿ ಎದ್ದು ಪ್ರಾರ್ಥಿಸುತ್ತಿದ್ದರೆ, ಅತ್ತು ಬೇಡಿಕೊಳ್ಳುತ್ತಾ ಇದ್ದರೆ, ಪತ್ನಿ ಒಂದೆರಡು ದಿನ ಅದನ್ನು ನೋಡುವಳು. ಅನಂತರ ಅವಳು ಸಹ ಖಂಡಿತವಾಗಿ ಅದರಿಂದ ಪ್ರಭಾವಿತಳಾಗುವಳು. ಮಹಿಳೆಯರು ಅನ್ಯರಿಂದ ಬಹಳ ಬೇಗನೇ ಪ್ರಭಾವಿತರಾಗುತ್ತಾರೆ.... ಅವರನ್ನು ತಿದ್ದಲು ಯಾವುದೇ ಶಾಲೆಯಿಂದ ಸಾಧ್ಯವಾಗದು." (ಅವರನ್ನು ಸರಿಪಡಿಸಲು ಯಾವುದೇ ಶಾಲೆಯ ಅಥವಾ ಸಂಸ್ಥೆಯ ಆವಶ್ಯಕತೆಯಿಲ್ಲ. ಪತಿಯಂದಿರ ಕೃತ್ಯರೂಪದ ಮಾದರಿ ಸಾಕು. ಪತ್ನಿಯರನ್ನು ಸುಧಾರಿಸಬೇಕಾದರೆ ಗಂಡಂದಿರು ತಮ್ಮ ಸುಧಾರಣೆ ಮಾಡಲಿ. ತಮ್ಮ ಕೃತ್ಯರೂಪದ ಮಾದರಿಯನ್ನು ಮುಂದಿಟ್ಟರೆ ಪತ್ನಿಯ ಸುಧಾರಣೆಯಾಗುವುದು.) "ಅಲ್ಲಾಹನು ಸ್ತ್ರೀ – ಪುರುಷರನ್ನು ಒಂದೇ ಅಸ್ತಿತ್ವವೆಂದು ಹೇಳಿದ್ದಾನೆ. ನನ್ನ ಪತಿಯಲ್ಲಿ ಇಂತಿಂತಹ ಕೆಡುಕುಗಳಿವೆ ಎಂದು ಹೇಳುವ ಸಂದರ್ಭ ಪತ್ನಿಯರಿಗೆ ದೊರಕುವಂತೆ ಮಾಡುವುದು ಪತಿಯರ ತಪ್ಪಾಗಿದೆ. ಪತಿ ಇಂತಿಂತಹ ಪಾಪಗಳನ್ನು ಮಾಡುತ್ತಾನೆ ಎಂದು ಪತ್ನಿ ಹೇಳುವಂತಹ ಸನ್ನಿವೇಶವೇ ಇರಬಾರದು. ಪತ್ನಿ ಎಷ್ಟು ಪ್ರಯತ್ನ ಮಾಡಿದರೂ ಪತಿಯ ಕೆಡುಕನ್ನು ಕಂಡುಹಿಡಿಯಲು ಸಾಧ್ಯವಾಗದಿದ್ದರೆ ಆಗ ಅವಳು ಧಾರ್ಮಿಕತೆಯ ಬಗ್ಗೆ ಚಿಂತಿಸುವಳು ಮತ್ತು ಧರ್ಮವನ್ನು ಮನವರಿಕೆ ಮಾಡಿಕೊಳ್ಳುವಳು."

**(ಮಲ್‌ಫೂಝಾತ್; ಸಂಪುಟ 5, ಪುಟ 207 – 208)**

ಎಂದರೆ, ಮೊದಲು ಅವಳು ಧಾರ್ಮಿಕ ಆಸಕ್ತಿ ಇಲ್ಲದವಳಾಗಿದ್ದರೂ ಧರ್ಮದ ಕಡೆಗೆ ಗಮನಹರಿಸುವಳು. ಸ್ತ್ರೀಯರು ಪುರುಷರಿಗಿಂತ ಹೆಚ್ಚು ಧರ್ಮಿಷ್ಠರು ಆಗಿರುವುದಾಗಿ ನಾನು ಇಲ್ಲಿ ನೋಡಿದ್ದೇನೆ. ನಮ್ಮ ಗಂಡಂದಿರಿಗೆ ಧರ್ಮದ ಬಗ್ಗೆ ಯಾವುದೇ ಶ್ರದ್ಧೆಯಿಲ್ಲವೆಂದು ಸ್ತ್ರೀಯರು ಕೆಲವು ಬಾರಿ ದೂರುತ್ತಾರೆ.

ಬೈಅತ್ ಮಾಡಿದ ಪುರುಷರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಇರುವ ಪ್ರತೀಕ್ಷೆ ಒಂದು ಕಡೆ ಇವುಗಳಾಗಿರುವಾಗ ಮತ್ತೊಂದು ಕಡೆ ನಾವು ನೋಡುವುದೇನೆಂದರೆ ಅನೇಕ ಪುರುಷರ ಬಗ್ಗೆ ಅವರ ಪತ್ನಿಯರು ದೂರುಗಳನ್ನು ನೀಡುತ್ತಿದ್ದಾರೆ. ನಮ್ಮ ಪತಿಯಂದಿರು ನಮಾಝ್‌ಗಳ ಬಗ್ಗೆ ಉದಾಸೀನತೆ ತೋರಿಸುತ್ತಾರೆ, ಬಾಜಮಾಅತ್

ನಮಾಝ್ ವಿಷಯ ಬಿಡಿ ಮನೆಯಲ್ಲಿ ಸಹ ನಮಾಝ್ ಅನುಷ್ಠಿಸುವುದಿಲ್ಲ, ಪತಿಯಂದಿರ ಧಾರ್ಮಿಕ ಜ್ಞಾನ ಬಲಹೀನವಾಗಿದೆ ಎಂದೆಲ್ಲ ದೂರುತ್ತಾರೆ. ಅನೇಕ ಮನೆಗಳ ಪುರುಷರು ಚಂದ ನೀಡುವುದರಲ್ಲಿಯೂ ಬಗ್ಗೆ ದೌರ್ಬಲ್ಯ ತೋರಿಸಿತ್ತಾರೆ. ಟಿ.ವಿ.ಯಲ್ಲಿ ಅನಾವಶ್ಯಕ ಕಾರ್ಯಕ್ರಮಗಳನ್ನು ವೀಕ್ಷಿಸುತ್ತಾರೆ. ಮಕ್ಕಳ ತರಬೇತಿ ಬಗ್ಗೆ ನಿರಾಸಕ್ತಿ ತೋರಿಸುತ್ತಾರೆ. ಪುರುಷರು ಮನೆಯ ಯಜಮಾನರಾಗಲು ಪ್ರಯತ್ನ ಮಾಡುವುದು ನಿಂದನೆ, ಹೊಡೆತ ಬಡಿತದ ಹೊರತು ಬೇರೆ ರೀತಿಗಳಲ್ಲಲ್ಲ. ಮಹಿಳೆಯರು ಪುರುಷರಿಂದ ಕಲಿತುಕೊಳ್ಳುವುದಕ್ಕೆ ಬದಲಾಗಿ ಅನೇಕ ಮನೆಗಳಲ್ಲಿ ಮಹಿಳೆಯರು ಪುರುಷರಿಗೆ ಕಲಿಸುತ್ತಾ ಇದ್ದಾರೆ ಅಥವಾ ಪುರುಷರಿಗೆ ಅದರ ಬಗ್ಗೆ ಗಮನಹರಿಸಿ ಮಕ್ಕಳು ಬಿಗಡಾಯಿಸದಂತೆ ನೋಡುತ್ತಾರೆ. ಯಾವ ಮನೆಗಳಲ್ಲಿ ಮಕ್ಕಳು ತರಬೇತಿ ರಹಿತರಾಗುತ್ತಾರೋ ಅದಕ್ಕೆ ಕಾರಣ ಪುರುಷರ ನಿರಾಸಕ್ತಿ ಅಥವಾ ಪತ್ನಿ ಮತ್ತು ಮಕ್ಕಳ ಮೇಲೆ ಪತಿ ನಡೆಸುವ ದೌರ್ಜನ್ಯವಾಗಿರುತ್ತದೆ. ನಮ್ಮ ತಂದೆ ನಮ್ಮೊಂದಿಗೆ ಅಥವಾ ತಾಯಿಯೊಂದಿಗೆ ವರ್ತಿಸುವ ರೀತಿ ಸರಿಯಲ್ಲ ಎಂದು ಕೆಲವು ಮಕ್ಕಳು ಸಹ ದೂರುತ್ತಾರೆ.

ಮನೆಗಳನ್ನು ಶಾಂತಿಭರಿತವನ್ನಾಗಿ ಮಾಡಲು, ಮುಂದಿನ ಪೀಳಿಗೆಯ ತರಬೇತಿ ಮಾಡಲು, ಅವರನ್ನು ಧರ್ಮದೊಂದಿಗೆ ಜೋಡಿಸಿಡಲು, ಪುರುಷರು ತಮ್ಮ ಸ್ಥಿತಿಯ ಬಗ್ಗೆ ಗಮನಹರಿಸುವುದು ಆವಶ್ಯಕ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುರುಷರ ಗಮನಹರಿಸುತ್ತಾ ಪುನಃ ಹೇಳುತ್ತಾರೆ:

> "ಪುರುಷ ತನ್ನ ಮನೆಯ ಇಮಾಮ್ ಆಗಿರುತ್ತಾನೆ. ಅವನೇ ಕೆಟ್ಟ ಪ್ರಭಾವ ಬೀರುವವನಾಗಿದ್ದರೆ ಪರಿಣಾಮ ಏನಾಗಬಹುದು? ಪುರುಷನು ತನ್ನ ಶಕ್ತಿಗಳನ್ನು ಸರಿಯಾದ ಸ್ಥಳದಲ್ಲಿ ಧರ್ಮಬದ್ಧ ರೀತಿಯಲ್ಲಿ ಬಳಸಬೇಕು. ಉದಾಹರಣೆಗೆ ಸಿಟ್ಟು. ಅದು ಮಿತಿಮೀರಿದರೆ ಹುಚ್ಚು ಹಿಡಿಯಲು ಸಾಧ್ಯವಿದೆ. ಯಾರು ಹೆಚ್ಚು ಕೋಪಿಷ್ಠನಾಗುತ್ತಾನೋ ಅವನಿಗೆ ವಿವೇಕಬುದ್ಧಿ ನಷ್ಟವಾಗುತ್ತದೆ. ವಿರೋಧಿಯೊಂದಿಗೂ ಕೋಪದಿಂದ ಮಾತನಾಡಬಾರದು."

**(ಮಲ್‌ಫೂಝಾತ್; ಭಾಗ 5,ಪುಟ 208)**

ನಾವು ಮುಟ್ಟಬೇಕಾದ ನೈತಿಕ ಮಟ್ಟ ಇದಾಗಿದೆ. ನಾನು ಹೇಳಿದಂತೆ ಭಾರತ ಮತ್ತು ಪಾಕಿಸ್ತಾನದ ಸ್ತ್ರೀಯರು ತಮ್ಮ ಪತಿಯರ ದೌರ್ಜನ್ಯದ ಬಗ್ಗೆ ನನಗೆ ಬರೆಯುತ್ತಾರೆ. ಎರಡೂ ದೇಶದ ನಝಾರತ್ ಇಸ್ಲಾಹೋ ಇರ್ಶಾದ್ ಮತ್ತು ಅಧೀನ ಸಂಘಟನೆಗಳು ಇದರ ಬಗ್ಗೆ ಗಮನಹರಿಸಬೇಕು. ಲೋಕದ ಇತರ ಕಡೆಗಳಲ್ಲೂ ಇದರ ಬಗ್ಗೆ ತರಬೇತಿ ನೀಡುವ ಕಾರ್ಯಕ್ರಮಗಳನ್ನು ಜರಗಿಸಲು ಹೆಚ್ಚು ಗಮನಹರಿಸಬೇಕು. ತಬ್ಲೀಗ್ ಮಾಡುವವರ, ಧಾರ್ಮಿಕ ವಿಷಯಗಳನ್ನು ಕಲಿಯುವವರ ಮನೆಗಳಲ್ಲಿ ನೆಮ್ಮದಿಯಿಲ್ಲದ ಸ್ಥಿತಿ ಇರುವುದಾದರೆ ತಬ್ಲೀಗಿನಿಂದ ಯಾವುದೇ ಲಾಭವಿಲ್ಲ.

ಸ್ತ್ರೀಯರ ಮನಶಾಸ್ತ್ರ ಮತ್ತು ಅವರು ಪುರುಷರನ್ನು ಹೇಗೆ ವೀಕ್ಷಿಸುತ್ತಾರೆ ಎಂಬುವುದನ್ನು ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಕಡೆ ಹೀಗೆ ವಿವರಿಸುತ್ತಾರೆ:

> "ಪುರುಷರ ಎಲ್ಲ ಸಂಗತಿಗಳನ್ನು ಮತ್ತು ಸ್ವಭಾವಗುಣಗಳನ್ನು ಸ್ತ್ರೀಯರು ವೀಕ್ಷಿಸುತ್ತಾರೆ. ನನ್ನ ಪತಿಯಲ್ಲಿ ಉದಾರತೆ, ಸಹನೆ, ತಾಳ್ಮೆ ಎಂಬೀ ತಖ್ವಾದ ಗುಣಗಳು ಇವೆ ಎಂದು ಪತ್ನಿ ಕಾಣುತ್ತಾಳೆ. ಪತಿಯನ್ನು ಮನವರಿಕೆ ಮಾಡಲು ಪತ್ನಿಗೆ ಸಿಗುವಂತಹ ಸಂದರ್ಭ ಬೇರೆ ಯಾರಿಗೂ ಲಭಿಸುವುದಿಲ್ಲ. ಸ್ತ್ರೀಯರನ್ನು ಕಳ್ಳತನ ಮಾಡುವವಳು ಎಂದು ಹೇಳಲಾಗಿದೆ. ಏಕೆಂದರೆ ಅವಳು ಒಳಗಿಂದೊಳಗೆ (ಪತಿಯ) ಸ್ವಭಾವಗುಣಗಳನ್ನು ಕದಿಯುತ್ತಾಳೆ. ಕೊನೆಗೆ ಪತಿಯ ಎಲ್ಲ ಸ್ವಭಾವಗುಣಗಳನ್ನು ಪಡೆಯುತ್ತಾಳೆ. ಒಂದು ವ್ಯಕ್ತಿಯ ಬಗ್ಗೆ ಹೀಗೆ ಹೇಳಲಾಗಿದೆ. ಅವನು ಇಸ್ಲಾಮ್ ತೊರೆದು ಕ್ರೈಸ್ತನಾದನು. ಅವನೊಂದಿಗೆ ಅವನ ಪತ್ನಿಯೂ ಕ್ರೈಸ್ತಳಾದಳು. ಅವಳು ಮೊದಲು ಶರಾಬು ಕುಡಿಯಲು ಆರಂಭಿಸಿದಳು, ಪರ್ದಾ ಧರಿಸುವುದನ್ನು ನಿಲ್ಲಿಸಿದಳು, ಅನ್ಯ ಪುರುಷರನ್ನು ಭೇಟಿಯಾಗಲು ಶುರುಮಾಡಿದಳು. ಈ ನಡುವೆ ಪತಿಗೆ ತನ್ನ ತಪ್ಪಿನ ಅರಿವಾಗಿ ಪುನಃ ಇಸ್ಲಾಮಿಗೆ ಮರಳಿದನು. ಇಸ್ಲಾಮಿಗೆ ಮರಳಲು ಪತಿ ತನ್ನ ಪತ್ನಿಗೆ ಹೇಳಿದನು. "ಈಗ ನಾನು ಮುಸ್ಲಿಮ್ ಆಗುವುದು ನಡೆಯದ ಸಂಗತಿಯಾಗಿದೆ. ಶರಾಬು ಕುಡಿಯುವ ಮತು ಇನ್ನಿತರ ಅಭ್ಯಾಸಗಳನ್ನು ಈಗ ನನ್ನಿಂದ ಬಿಡಲಾಗದು" ಎಂದು ಪತ್ನಿ ಉತ್ತರಕೊಟ್ಟಳು.

**(ಮಲ್‌ಫೂಝಾತ್‌ನಿಂದ ಉಲ್ಲೇಖಿತ; ಸಂಪುಟ 5, ಪುಟ 208 – 209)**

ಇಲ್ಲಿ ವಿವರಿಸಿದ ಉದಾಹರಣೆಯಲ್ಲಿ ಪುರುಷನು ಇಸ್ಲಾಮನ್ನು ತೊರೆದು ಕ್ರೈಸ್ತನಾಗುತ್ತಾನೆ. ಆದರೆ ಹಲವು ಪುರುಷರು ಇಸ್ಲಾಮನ್ನು ತೊರೆಯುವುದಿಲ್ಲ, ನಾಮಮಾತ್ರಕ್ಕೆ ಇಸ್ಲಾಮಿನೊಂದಿಗೆ ಸಂಬಂಧವಿರುತ್ತದೆ. ತಮ್ಮನ್ನು ಮುಸ್ಲಿಮರೆಂದೇ ಹೇಳುತ್ತಾರೆ. ಆದರೆ ಸ್ವಾತಂತ್ರ್ಯದ ಹೆಸರಲ್ಲಿ ಹಲವು ತಪ್ಪು ಕೆಲಸಗಳಲ್ಲಿ ಮುಳುಗಿರುತ್ತಾರೆ. ಅನಂತರ ಅವರನ್ನು ನೋಡಿ ಅಥವಾ ಮಾತನ್ನು ಕೇಳಿ ಸ್ತ್ರೀಯರು ಸಹ ಸ್ವಾತಂತ್ರ್ಯದ ಹೆಸರಲ್ಲಿ ಈ ಪರಿಸರದೊಂದಿಗೆ ಹೊಂದಿಕೊಳ್ಳುತ್ತಾರೆ. ತಮ್ಮ ಪತ್ನಿಯಂದಿರು ಹೆಚ್ಚು ಸ್ವಾತಂತ್ರ್ಯರಾಗಿದ್ದಾರೆ ಎಂದು ಸ್ವಲ್ಪ ಕಾಲದ ನಂತರ ಪತಿಯರಿಗೆ ಮನವರಿಕೆಯಾಗಿ ಅವರನ್ನು ಮರಳಿ ತರಲು ಪ್ರಯತ್ನಿಸುವಾಗ ಜಗಳ ಶುರುವಾಗುತ್ತದೆ. ಅನಂತರ ಹೊಡೆಯಲು ಬಡಿಯಲು ಶುರುಮಾಡುತ್ತಾರೆ. ಇಲ್ಲಿಯೂ ಇಂತಹ ಘಟನೆಗಳು ನಡೆಯುತ್ತವೆ. ಈ ದೇಶಗಳಲ್ಲಿ ಬೇಗನೆ ಪೊಲೀಸ್ ಮಧ್ಯ ಪ್ರವೇಶಿಸುತ್ತಾರೆ. ಸ್ತ್ರೀಯರ ಮತ್ತು ಮಕ್ಕಳ ಹಕ್ಕುಗಳಿಗೆ ಹೋರಾಡುವ ಸಂಸ್ಥೆಗಳು ಮಧ್ಯ ಪ್ರವೇಶಿಸುತ್ತಾರೆ. ಅನಂತರ ಮನೆಯ ವಾತಾವರಣ ನುಚ್ಚುನೂರಾಗುತ್ತದೆ. ಮಕ್ಕಳು ಸಹ ಹಾಳಾಗುತ್ತಾರೆ. ಆದ್ದರಿಂದ ಕುಟುಂಬ ಮುರಿಯುವ ಮತ್ತು ಮಕ್ಕಳು ಹಾಳಾಗುವ ಮುನ್ನವೇ ಪುರುಷರು ತಮ್ಮ ಜವಾಬ್ದಾರಿಗಳನ್ನು ಮನವರಿಕೆ ಮಾಡಿಕೊಳ್ಳಬೇಕು. ಪತ್ನಿ ಮತ್ತು ಮಕ್ಕಳಿಗೆ ಸಂಬಂಧಿಸಿ ಇಸ್ಲಾಮ್ ಧರ್ಮ ತಮ್ಮ ಮೇಲೆ ಹೊರಿಸಿರುವ ಹೊಣೆಗಾರಿಕೆಗಳನ್ನು ಅವರು ಅರಿತುಕೊಳ್ಳಬೇಕು.

ಮಹಿಳೆಯರ ಹಕ್ಕುಗಳು ಮತ್ತು ಅವರೊಂದಿಗೆ ವರ್ತನೆ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಮ್ಮೆ ಹೀಗೆ ಹೇಳಿದರು:

"ಮಹಿಳೆಯರ ಹಕ್ಕುಗಳನ್ನು ಇಸ್ಲಾಮ್ ಸಂರಕ್ಷಿಸಿದ ರೀತಿಯಲ್ಲಿ ಬೇರೆ ಯಾವ ಧರ್ಮವೂ ಖಂಡಿತವಾಗಿ ಸಂರಕ್ಷಿಸಿಲ್ಲ. ಪವಿತ್ರ ಖುರ್ಆನ್ ಬಹಳ ಸಂಕ್ಷಿಪ್ತವಾಗಿ ಹೀಗೆ ನಿರ್ದೇಶಿಸಿದೆ: وَلَهُنَّ مِثْلُ الَّذِي عَلَيْهِنَّ **ವಲಹುನ್ನ ಮಿಸ್‌ಲುಲ್ಲಝೀ ಅಲೈಹಿನ್ನ** ಎಂದರೆ, ಪುರುಷರಿಗೆ ಮಹಿಳೆಯರ ಮೇಲೆ ಹಕ್ಕುಗಳು ಇರುವ ಹಾಗೆ ಮಹಿಳೆಯರಿಗೂ ಪುರುಷರ ಮೇಲೆ ಹಕ್ಕುಗಳು ಇವೆ. (**ಸೂರಃ ಬಖರಃ: 229**). ಕೆಲವರು ಈ ಬಡಪಾಯಿ ಸ್ತ್ರೀಯರನ್ನು ಪಾದರಕ್ಷೆಯಂತೆ ಕಾಣುತ್ತಾರೆ. ಅವರಿಂದ

> ನೀಚವಾದ ಕೆಲಸಗಳನ್ನು ಮಾಡಿಸುತ್ತಾರೆ. ಅವರನ್ನು ಬೈಯ್ಯುತ್ತಾರೆ ಮತ್ತು ಬಹಳ ಕೀಳುಭಾವದಿಂದ ನೋಡುತ್ತಾರೆ. ಜೀವಂತವೇ ಮಣ್ಣಿನೊಳಗೆ ಹೂಳುವ ರೀತಿಯಲ್ಲಿ ಮತ್ತು ಅನುಮತನೀಯವಲ್ಲದ ರೀತಿಯ ಪರ್ದಾ ಮಾಡಿಸುತ್ತಾರೆ."

ಈ ರೀತಿಯ ನಿಷ್ಠುರತೆ ಇರಬಾರದು. ಆದರೆ ಇಸ್ಲಾಮ್ ಸಂತುಲಿತ ಧರ್ಮವಾಗಿದೆ. ಸ್ತ್ರೀಯರು ಸಹ ಸಮತೋಲನವನ್ನು ಕಾಪಾಡಬೇಕು. ಆವಶ್ಯಕ್ಕಿಂತ ಅಧಿಕ ಸ್ವತಂತ್ರರಾಗಬಾರದು. ಕೆಲವು ಸ್ತ್ರೀಯರು ಆವಶ್ಯಕ್ಕಿಂತ ಅಧಿಕ ಸ್ವತಂತ್ರರಾಗಿದ್ದಾರೆ. ನಾಮಮಾತ್ರಕ್ಕೆ ಪರ್ದಾ ಧರಿಸುವುದು ಕಂಡುಬಂದಿದೆ. ಇದು ಕೂಡ ತಪ್ಪು. ಸ್ತ್ರೀಯರು ತಲೆ ಮತ್ತು ಶರೀರವನ್ನು ಲಜ್ಜೆಯ ಆವಶ್ಯವನ್ನು ಪೂರ್ತಿಮಾಡುತ್ತಾ ಮರೆಮಾಡಬೇಕು. ಇದು ಅಲ್ಲಾಹನ ಆಜ್ಞೆಯಾಗಿದೆ. ಇದನ್ನು ಗಮನಿಸಬೇಕು.

ಪತಿ – ಪತ್ನಿಯರ ಸಂಬಂಧ ಹೇಗಿರಬೇಕೆಂಬುದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ವಿವರಿಸುತ್ತಾರೆ:

> ಪತಿ – ಪತ್ನಿಯರ ಸಂಬಂಧವೂ ನೈಜ ಮತ್ತು ಸತ್ಯಸಂಧರಾದ ಸ್ನೇಹಿತರಂತೆ ಆಗಿರಬೇಕು. ಮನುಷ್ಯನ ಸದ್ಗುಣಗಳ ಬಗ್ಗೆ, ಅಲ್ಲಾಹನೊಂದಿಗೆ ಸಂಬಂಧದ ಬಗ್ಗೆ ಪ್ರಥಮ ಸಾಕ್ಷ್ಯ ನೀಡಬಲ್ಲವರು ಪತ್ನಿಯರೇ ಆಗಿರುತ್ತಾರೆ. ಪತ್ನಿಯೊಂದಿಗೆ ಸಂಬಂಧ ಒಳ್ಳೆಯದಾಗಿರದಿದ್ದರೆ ಅಲ್ಲಾಹನೊಂದಿಗೆ ಸಂಬಂಧ ಸರಿಯಾಗುವುದು ಹೇಗೆ?

**(ಮಲ್‌ಫೂಝಾತ್; ಸಂಪುಟ 5, ಪುಟ 417 – 418)**

## ತಂದೆಯ ಹೊಣೆಗಾರಿಕೆಗಳು

ತಂದೆ ಎಂಬ ನೆಲೆಯಲ್ಲಿ ಪುರುಷರು ತಮ್ಮ ಹೊಣೆಗಾರಿಕೆಗಳನ್ನು ಮನವರಿಕೆ ಮಾಡಬೇಕಾಗಿದೆ. ಮಕ್ಕಳ ತರಬೇತಿ ತಾಯಿಯ ಹೊಣೆಗಾರಿಕೆ ಮಾತ್ರವಾಗಿದೆ ಎಂದು ಭಾವಿಸಬಾರದು. ನಿಸ್ಸಂಶಯವಾಗಿ ಒಂದು ನಿರ್ದಿಷ್ಟ ಪ್ರಾಯದ ತನಕ ಮಗು ತಾಯಿಯ ಜೊತೆ ಇರುತ್ತದೆ. ಶೈಶವ ಕಾಲದಲ್ಲಿ ತಾಯಿಯು ನೀಡುವ ತರಬೇತಿ ಬಹಳ ಪ್ರಮುಖ ಪಾತ್ರವಹಿಸುತ್ತದೆ. ಆದರೆ ಇದರಿಂದ ತಂದೆ ತನ್ನ ಹೊಣೆಗಾರಿಕೆಯಿಂದ ಮುಕ್ತವಲ್ಲ. ತಂದೆ ಸಹ ಮಕ್ಕಳ ತರಬೇತಿ ವಿಷಯದಲ್ಲಿ ತನ್ನ ಪಾತ್ರವಹಿಸಬೇಕು. ವಿಶಿಷ್ಟವಾಗಿ

ಗಂಡು ಮಕ್ಕಳಿಗೆ ಏಳೆಂಟು ವಯಸ್ಸು ಆಗುವಾಗ ಅವರ ಕಡೆಗೆ ತಂದೆ ಗಮನಹರಿಸುವುದು ಆವಶ್ಯಕವಾಗುತ್ತದೆ. ಹಾಗೆ ಮಾಡದಿದ್ದರೆ, ವಿಶಿಷ್ಟವಾಗಿ ಇಲ್ಲಿನ ಪಾಶ್ಚಿಮಾತ್ಯ ಪರಿಸರದಲ್ಲಿ, ಮಕ್ಕಳು ಹಾಳಾಗುವ ಸಾಧ್ಯತೆಗಳು ಹೆಚ್ಚು. ಇಲ್ಲಿಯೂ ಪುರುಷರು ಅಥವಾ ತಂದೆಯಂದಿರು ತಮ್ಮ ಉತ್ತಮ ಮಾದರಿಯನ್ನು ತೋರಿಸಬೇಕು ಮತ್ತು ನೆಲೆನಿಲ್ಲಿಸಬೇಕು. ತಂದೆಯಂದಿರು ಮಕ್ಕಳನ್ನು ಗೌರವಿಸಿ ಅವರ ಸ್ವಭಾವ ಒಳ್ಳೆಯದಾಗುವಂತೆ ಮಾಡಬೇಕಲ್ಲದೆ ಇಲ್ಲಿನ ಪರಿಸರದ ಕೆಟ್ಟ ಪ್ರಭಾವದಿಂದ ಸುರಕ್ಷಿತರಾಗಲು ಉತ್ತಮ ರೀತಿಯಲ್ಲಿ ಅವರ ಮೇಲ್ನೋಟವಹಿಸಬೇಕು. ಮಕ್ಕಳೊಂದಿಗೆ ತಂದೆಯ ಉತ್ತಮ ಸಂಬಂಧದಿಂದ ತಾವು ಸುರಕ್ಷಿತರೆಂಬ ಭಾವನೆ ಮಕ್ಕಳಲ್ಲಿ ಉಂಟಾಗುತ್ತದೆ.

ಮಕ್ಕಳಲ್ಲಿ ಹಿಂಜರಿಕೆ ಉಂಟಾಗಿದೆ, ಆತ್ಮವಿಶ್ವಾಸವಿಲ್ಲವಾಗಿದೆ, ಸುಳ್ಳು ಮಾತುಗಳನ್ನು ಹೆಚ್ಚಾಗಿ ಹೇಳುತ್ತಾರೆ ಎಂದೆಲ್ಲ ಮಕ್ಕಳ ವರ್ತನೆ ಬಗ್ಗೆ ಹೆತ್ತವರು ದೂರುತ್ತಾರೆ. ಮಕ್ಕಳ ಹತ್ತಿರವಾಗಲು, ಅವರೊಂದಿಗೆ ವೈಯಕ್ತಿಕ ಸಂಬಂಧವಿರಿಸಲು ಸ್ನೇಹಬಂಧವಿರಿಸಲು ಅವರಿಗೆ ನಿರ್ದೇಶಿಸಲಾಯಿತು. ಅದರಂತೆ ತಂದೆಯವರು ನಡೆಯಲು ಆರಂಭಿಸಿದಾಗ ಮಕ್ಕಳ ದೌರ್ಬಲ್ಯಗಳು ದೂರವಾಗಲು ತೊಡಗಿದ್ದನ್ನು ಕಾಣುತ್ತೇವೆ. ಆದ್ದರಿಂದ ಹೊರಗಿನ ಪರಿಸರದಿಂದ ತಾವು ಸುರಕ್ಷಿತರೆಂಬ ಭಾವನೆ ಅವರಲ್ಲಿ ಉಂಟಾಗಲು ತಂದೆಯಂದಿರು ಸ್ವಲ್ಪ ಸಮಯ ಮಕ್ಕಳೊಂದಿಗೆ ಇರಬೇಕು.

ಮಕ್ಕಳ ಧಾರ್ಮಿಕ ಶಿಕ್ಷಣದ ಬಗ್ಗೆ ಶ್ರದ್ಧೆವಹಿಸಬೇಕು. ಮಕ್ಕಳ ತರಬೇತಿ ಕಡೆಗೆ ಗಮನಹರಿಸುವುದರೊಂದಿಗೆ ಅವರಿಗಾಗಿ ಪ್ರಾರ್ಥಿಸುತ್ತಲೂ ಇರಬೇಕು. ಇದು ಸಹ ಬಹಳ ಮುಖ್ಯವಾದ ಸಂಗತಿಯಾಗಿದೆ. ತರಬೇತಿಯ ಸರಿಯಾದ ಫಲ ಅಲ್ಲಾಹನ ಅನುಗ್ರಹದಿಂದ ಸಿಗುತ್ತದೆ. ಅದರೊಂದಿಗೆ ಮನುಷ್ಯನು ಮಾಡಬೇಕಾದ ಪ್ರಯತ್ನ ಖಂಡಿತ ಮಾಡಬೇಕು.

## ತರಬೇತಿಯ ರೀತಿ ಮತ್ತು ಮಕ್ಕಳಿಗಾಗಿ ಪ್ರಾರ್ಥನೆ

ತರಬೇತಿಯ ರೀತಿ ಮತ್ತು ಮಕ್ಕಳಿಗಾಗಿ ಮಾಡಬೇಕಾದ ಪ್ರಾರ್ಥನೆ ಕಡೆಗೆ ಗಮನಹರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

"ಸರಿಯಾದ ಮಾರ್ಗದರ್ಶನ ಮತ್ತು ತರಬೇತಿ ಅಲ್ಲಾಹನ ಕೆಲಸವೇ

ಆಗಿದೆ. ಬಹಳ ಹೆಚ್ಚು ಹಿಂಬಾಲಿಸುತ್ತಾ ಇರುವುದು ಮತ್ತು ಒಂದು ವಿಷಯದ ಬಗ್ಗೆ ಮಿತಿಮೀರಿ ಒತ್ತಿ ಹೇಳುವುದು, ನಾವೇ ಮಾರ್ಗದರ್ಶನದ ಮಾಲಿಕರೆಂದು ಗಣಿಸುವಂತಾಗುತ್ತದೆ. ನಾವು ನಮ್ಮ ಇಚ್ಚೆ ಪ್ರಕಾರ ಅವರನ್ನು ಒಂದು ದಾರಿಗೆ ತರುವೆವು ಎಂದು ಯೋಚಿಸುವುದು ಒಂದು ರೀತಿಯ ರಹಸ್ಯ ಶಿರ್ಕ್ (ಬಹುದೇವಾರಾಧನೆ) ಆಗಿದೆ. ನಮ್ಮ ಜಮಾಅತಿನವರು ಇದರಿಂದ ದೂರಸರಿಯಬೇಕು. ನಾವು ನಮ್ಮ ಮಕ್ಕಳ ಪರವಾಗಿ ಪ್ರಾರ್ಥಿಸುತ್ತೇವೆ. ಅನಂತರ ಸಂಕ್ಷಿಪ್ತವಾಗಿ ಪಾಠಗಳನ್ನು ಮತ್ತು ಶಿಷ್ಟಾಚಾರಗಳನ್ನು ಕಲಿಸುತ್ತೇವೆ. ಇದಕ್ಕಿಂತ ಹೆಚ್ಚಿಗೆ ಏನೂ ಇಲ್ಲ. ಅನಂತರ ನಾವು ನಮ್ಮ ಪೂರ್ಣ ಭರವಸೆಯನ್ನು ಅಲ್ಲಾಹನ ಮೇಲೆ ಇರಿಸಿದ್ದೇವೆ. ಅವರೊಳಗೆ ಇರುವ ಸಾತ್ವಿಕತೆಯ ಬೀಜದ ಗುಣವಂತಿಕೆ ಪ್ರಕಾರ ತಕ್ಕ ಸಮಯದಲ್ಲಿ ಹಚ್ಚಹಸುರಾದ ವೃಕ್ಷವಾಗುವುದು."

**(ಮಲ್‌ಫೂಝಾತ್; ಸಂಪುಟ 2, ಪುಟ 5)**

ನಾವು ಪ್ರಾರ್ಥನೆ ಮಾಡುತ್ತೇವೆ ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುವಾಗ ಅವರ ಪ್ರಾರ್ಥನೆಯ ಮಟ್ಟ ಸಹ ಬಹಳ ಉನ್ನತವಾದದ್ದೆಂದು ನೆನಪಿಡಬೇಕು. ಈ ಸಂಗತಿಯನ್ನು ಸಾಧಾರಣ ವಿಷಯವೆಂದು ಭಾವಿಸಬಾರದು. ಪ್ರಾರ್ಥನೆಯ ಈ ಮಟ್ಟವನ್ನು ತಲುಪಲು ನಾವು ಬಹಳ ಪರಿಶ್ರಮಪಡಬೇಕಾಗಿದೆ. ಇದರ ಕಡೆಗೆ ತಂದೆಯಂದಿರು ಗಮನಹರಿಸಬೇಕು.

ತಂದೆಯೆಂಬ ನೆಲೆಯಲ್ಲಿ ಮಕ್ಕಳ ತರಬೇತಿ ಕಡೆಗೆ ಹೇಗೆ ಮತ್ತು ಎಷ್ಟು ಶ್ರದ್ಧೆವಹಿಸಬೇಕೆಂಬುದರ ಕಡೆಗೆ ಗಮನಹರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

"ಕೆಲವರು ಮಕ್ಕಳಿಗೋಸ್ಕರ ಸಂಪತ್ತು ಬಿಟ್ಟು ಹೋಗಲು ಬಯಸುತ್ತಾರೆ. ನನಗೆ ಆಶ್ಚರ್ಯವಾಗುವುದೇನೆಂದರೆ ಮಕ್ಕಳಿಗೋಸ್ಕರ ಸಂಪತ್ತು ಬಿಟ್ಟು ಹೋಗುವ ಬಗ್ಗೆ ಅವರು ಯೋಚಿಸುತ್ತಾರೆ. ಆದರೆ ತಮ್ಮ ಮಕ್ಕಳು ಸಾತ್ವಿಕರಾಗಬೇಕು, ತಮ್ಮ ಮಕ್ಕಳು ಕೆಟ್ಟವರಾಗಬಾರದು ಎಂದು ಅವರು ಯೋಚಿಸುವುದೇ ಇಲ್ಲ. ಅವರಿಗೆ ಅದರ ಬಗ್ಗೆ ಲಕ್ಷ್ಯವೇ ಇಲ್ಲ. ಅವರು ತಮ್ಮ ಜೀವಿತದಲ್ಲಿಯೇ ತಮ್ಮ ಮಕ್ಕಳ ಕೈಯಿಂದ ಕಂಗಾಲಾಗುತ್ತಾರೆ

ಮತ್ತು ಅವರ ದುಷ್ಕೃತ್ಯಗಳ ಕಾರಣದಿಂದ ಕಷ್ಟದಲ್ಲಿ ಸಿಲುಕುತ್ತಾರೆ. ಹಲವು ರೀತಿಯ ಮೋಸಗಾರಿಕೆಯ ಮಾರ್ಗಗಳಿಂದ ಸಂಪಾದಿಸಿದ ಸಂಪತ್ತು ಕೊನೆಗೆ ಶರಾಬು ಸೇವನೆ ಮತ್ತು ದುಷ್ಕೃತ್ಯದಲ್ಲಿ ಖರ್ಚಾಗುತ್ತದೆ. ಆ ಮಕ್ಕಳು ತಂದೆ – ತಾಯಂದಿರಿಗೆ ದುಷ್ಟರಾದ ಮತ್ತು ದುರಾಚಾರಿಗಳಾದ ವಾರೀಸುದಾರರಾಗುತ್ತಾರೆ. ಮಕ್ಕಳ ಮೂಲಕ ಉಂಟಾಗುವ ಪರೀಕ್ಷೆ ಬಹಳ ದೊಡ್ಡ ಸಂಕಷ್ಟವಾಗಿದೆ. ಆದರೆ ಮಕ್ಕಳು ಸಾತ್ವಿಕರಾದರೆ ಯಾವುದೇ ಚಿಂತೆಯಿಲ್ಲ. ಅಲ್ಲಾಹನು ಹೇಳುತ್ತಾನೆ: **وَهُوَ يَتَوَلَّى الصَّالِحِينَ ವಹುವ ಯತವಲ್ಲ ಸ್ಸಾಲಿಹೀನ್**. (ಅಲ್ಲಾಹನು ಸಾತ್ವಿಕರ ಸಂರಕ್ಷಕನಾಗಿರುತ್ತಾನೆ). ಮಕ್ಕಳು ಕೆಟ್ಟವರಾದರೆ ಅವರಿಗೋಸ್ಕರ ಲಕ್ಷಗಟ್ಟಲೆ ರೂಪಾಯಿಗಳನ್ನು ಬಿಟ್ಟು ಹೋದರೂ ಅವರು ದುರ್ವ್ಯಯ ಮಾಡಿ ದರಿದ್ರರಾಗಿ ಕಷ್ಟಗಳಿಗೂ ವಿಪತ್ತುಗಳಿಗೂ ಅನಿವಾರ್ಯವಾಗಿ ಪಾತ್ರರಾಗುವರು.

ಯಾರು ಅಲ್ಲಾಹನ ಇಚ್ಛೆಯಂತೆ ನಡೆಯುತ್ತಾನೋ ಅವನಿಗೆ ಮಕ್ಕಳ ಬಗ್ಗೆ ಯಾವುದೇ ಚಿಂತೆಯಿರುವುದಿಲ್ಲ. ಅವನು ಅವರು ಗುಣವಂತರಾಗಲು ಪ್ರಯತ್ನಿಸಬೇಕು ಮತ್ತು ಅವರಿಗಾಗಿ ಪ್ರಾರ್ಥಿಸಬೇಕು. ಈ ಸ್ಥಿತಿಯಲ್ಲಿ ಅಲ್ಲಾಹನು ಸ್ವತಃ ಅವರ ಸಂರಕ್ಷಕನಾಗುತ್ತಾನೆ..... ಹಝ್ರತ್ ದಾಊದ್ ಅಲೈಹಿಸ್ಸಲಾಮರ ಒಂದು ಹೇಳಿಕೆ ಪ್ರಸಿದ್ಧವಾಗಿದೆ. ಅವರು ಹೇಳುತ್ತಾರೆ: "ನಾನು ಮಗುವಾಗಿದ್ದೆ, ಯುವಕನಾದೆ, ಈಗ ಮುದುಕನಾಗಿರುವೆನು. ಆದರೆ ಇಂದಿನ ತನಕ ಸಾತ್ವಿಕನು ಆಹಾರದ ಕೊರತೆಯ ಸ್ಥಿತಿಯಲ್ಲಿರುವುದಾಗಿ ನಾನು ಕಂಡಿಲ್ಲ, ಅವರ ಮಕ್ಕಳು ಭಿಕ್ಷೆಬೇಡುವುದನ್ನು ಕೂಡ ನಾನು ಕಂಡಿಲ್ಲ. ಅಲ್ಲಾಹನ ಅವರ ಅನೇಕ ಪೀಳಿಗೆಗಳನ್ನು ಸಂರಕ್ಷಿಸುತ್ತಾನೆ. ಆದ್ದರಿಂದ ಸ್ವತಃ ಸಾತ್ವಿಕರಾಗಿರಿ ಮತ್ತು ತಮ್ಮ ಮಕ್ಕಳಿಗೆ ಒಳಿತಿನ ಹಾಗು ಸತ್ಕರ್ಮದ ಒಂದು ಉತ್ತಮ ಮಾದರಿಯಾಗಿರಿ. ಮಕ್ಕಳ ತರಬೇತಿಯ ಕರ್ತವ್ಯವನು ನಿರ್ವಹಿಸಲು ಸಹ ತಮ್ಮ ಸ್ಥಿತಿಗತಿಗಳನ್ನು ಇಸ್ಲಾಮಿನ ಪಾಠಗಳ ಪ್ರಕಾರ ನಡೆಸಬೇಕಾಗಿದೆ. ಆಗ ಮಾತ್ರ ಮುಂದಿನ ಪೀಳಿಗೆ ಸರಿಯಾದ ಮಾರ್ಗದಲ್ಲಿ ನಡೆಯುವವರಾಗುವರು ಮತ್ತು ಮಾತಾಪಿತರ ಸಂತೋಷಕ್ಕೆ ಕಾರಣವಾಗುವರು. ಅವರನ್ನು ಸಾತ್ವಿಕರನ್ನಾಗಿ ಮಾಡಲಿಕ್ಕೆ ಪರಿಶ್ರಮ ಮತ್ತು ದುಆ ಮಾಡಬೇಕು.

**(ಮಲ್‌ಫೂಝಾತ್; ಸಂಪುಟ 8, ಪುಟ 108 – 110)**

## ಮಕ್ಕಳ ಕರ್ತವ್ಯಗಳು

ತನ್ನ ಮಕ್ಕಳ ತರಬೇತಿ ಬಗ್ಗೆ ಗಮನಹರಿಸಲು ಮತ್ತು ಅವರಿಗೋಸ್ಕರ ಪ್ರಾರ್ಥಿಸಲು ಇಸ್ಲಾಮ್ ತಂದೆಯಂದರಿಗೆ ಹೇಳುವುದರೊಂದಿಗೆ ಮಕ್ಕಳಿಗೂ ಕೆಲವು ಕರ್ತವ್ಯಗಳ ಬಗ್ಗೆ ಆದೇಶಿಸಿದೆ. ಮಕ್ಕಳು ಪ್ರೌಢಾವಸ್ಥೆಗೆ ತಲುಪುವಾಗ ಅವರು ಮಾತಾಪಿತರಿಗೆ ಸಲ್ಲಿಸಬೇಕಾದ ಹಕ್ಕುಗಳನ್ನು ಈಡೇರಿಸಬೇಕೆಂದು ಇಸ್ಲಾಮ್ ಆಜ್ಞಾಪಿಸಿದೆ. ಇವು ಸಂಬಂಧಗಳ ಹಕ್ಕುಗಳ ಕೊಂಡಿಗಳಾಗಿವೆ. ಒಂದು ಇನ್ನೊಂದರೊಂದಿಗೆ ಸೇರಿಕೊಂಡಿರುವಾಗ ನೆಮ್ಮದಿಭರಿತ ಸಮಾಜ ಉಂಟಾಗುತ್ತದೆ.

ಮಾತಾಪಿತರಿಗೆ ಸಂಬಂಧಿಸಿದ ಹಕ್ಕುಗಳನ್ನು ಈಡೇರಿಸುವುದು ಎಷ್ಟು ದೊಡ್ಡ ಹೊಣೆಗಾರಿಕೆಯಾಗಿದೆ ಮತ್ತು ಅದಕ್ಕೆ ಎಷ್ಟು ಪ್ರಾಮುಖ್ಯತೆ ಇದೆ ಎಂಬುದರ ಅರಿವು ಪ್ರತಿಯೊಬ್ಬ ಸತ್ಯವಿಶ್ವಾಸಿಗೆ ಇರಬೇಕು. ಒಬ್ಬ ಹುಡುಗ ಯುವಕನಾಗುವಾಗ ತನ್ನ ತಂದೆ ತಾಯಂದಿರ ಹಕ್ಕುಗಳನ್ನು ಹೇಗೆ ಈಡೇರಿಸಬೇಕು ಎನ್ನುವುದರ ಬಗ್ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಂದು ಸಂದರ್ಭದಲ್ಲಿ ಉಪದೇಶ ನೀಡಿದ್ದರು.

> ಅಬ್ದುಲ್ಲಾಹ್ ಬಿನ್ ಅಮ್ರ್ ವರದಿ ಮಾಡುತ್ತಾರೆ: ಒಬ್ಬ ವ್ಯಕ್ತಿ ಬಂದು 'ನಾನು ಜಿಹಾದ್‌ಗೆ ಹೋಗಲು ಬಯಸುತ್ತೇನೆ' ಎಂದು ಹೇಳಿದಾಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಕೇಳಿದರು: 'ನಿನ್ನ ತಂದೆ ತಾಯಿ ಜೀವಂತವಾಗಿದ್ದಾರೆಯೇ?' ಆ ಯುವಕ "ಹೌದು" ಎಂದು ಉತ್ತರಿಸಿದ. ಆಗ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನೀನು ಅವರಿಬ್ಬರ ಸೇವೆ ಮಾಡು. ಇದೇ ನಿನ್ನ ಜಿಹಾದ್ ಆಗಿದೆ.

**(ಸಹೀಹ್ ಬುಖಾರಿ; ಕಿತಾಬುಲ್ ಜಿಹಾದ್ ವಸ್ಸೈರ್ ಬಿಇಝ್ನಿಲ್ ಅಬ್ವೈನ್, ಹದೀಸ್ 3004)**

ಇದರಿಂದ ತಂದೆತಾಯಂದಿರ ಸೇವೆಯ ಪ್ರಾಮುಖ್ಯತೆಯನ್ನು ಊಹಿಸಬಹುದು. ಇದು ಮಾತ್ರವಲ್ಲ, ಪರಸ್ಪರ ಸ್ನೇಹಸಂಬಂಧವನ್ನು ವಿಶಾಲಗೊಳಿಸಲು ತಂದೆಯರ ಸ್ನೇಹಿತರೊಂದಿಗೆ ಸಹ ಉತ್ತಮ ರೀತಿಯಲ್ಲಿ ವರ್ತಿಸಲು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಉಪದೇಶಿಸಿರುವರು. ಒಂದು ಸಂದರ್ಭದಲ್ಲಿ ಅವರು ಹೀಗೆ ಹೇಳಿದರು:

"ತಂದೆಯ ಮರಣದ ನಂತರ ಅವರ ಸ್ನೇಹಿತರೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸುವುದು ಮನುಷ್ಯನ ಅತ್ಯುತ್ತಮ ಸತ್ಕರ್ಮವಾಗಿದೆ."

**(ಸುನನ್ ಅಬೀ ದಾಊದ್; ಕಿತಾಬುಲ್ ಅದಬ್, ಬಾಬ್ ಫೀ ಬಿರ್ರುಲ್ ವಾಲಿದೈನ್, ಹದೀಸ್ 5143)**

ಈ ವಿಷಯವನ್ನು ಇನ್ನೂ ಸ್ಪಷ್ಟವಾದ ರೀತಿಯಲ್ಲಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಒಂದು ಸಂದರ್ಭದಲ್ಲಿ ಹೇಳಿದ್ದರು.

ಹಝ್ರತ್ ಅಬೂ ಅಸ್‌ಯದುಸ್ಸಾಲ್‌ದೀ ವರದಿ ಮಾಡುತ್ತಾರೆ: ಒಮ್ಮೆ ನಾವು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿ ಉಪಸ್ಥಿತರಿದ್ದೆವು. ಆಗ ಬನೀ ಸಲ್ಮ ಗೋತ್ರದ ಒಬ್ಬ ವ್ಯಕ್ತಿ ಬಂದು ಕೇಳಿದರು: ಮಾತಾಪಿತರ ಮರಣದ ನಂತರ ಅವರಿಗೋಸ್ಕರ ನಾನು ಮಾಡಬಹುದಾದ ಯಾವುದಾದರೂ ಸತ್ಕರ್ಮವಿದೆಯೇ? ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: "ಖಂಡಿತ ಇವೆ. ನೀನು ಅವರಿಗೋಸ್ಕರ ಪ್ರಾರ್ಥಿಸು. ಅವರನ್ನು ಕ್ಷಮಿಸಬೇಕೆಂದು ಅಲ್ಲಾಹನನ್ನು ಬೇಡಿಕೊಳ್ಳು. ಅವರು ಯಾರೊಂದಿಗಾದರೂ ಏನಾದರೂ ವಾಗ್ದಾನ ಮಾಡಿದ್ದರೆ ಅದನ್ನು ಈಡೇರಿಸು. ಅವರು ಜೀವಿಸಿರುವಾಗ ತಮ್ಮ ಸಂಬಂಧಿಕರೊಂದಿಗೆ ಇರಿಸಿದಂತಹ ಸ್ನೇಹಸಂಬಂಧ ಮತ್ತು ಸದ್ವರ್ತನೆಯನ್ನು ಅವರೊಂದಿಗೆ ನೀನೂ ಇರಿಸು. ಅವರ ಸ್ನೇಹಿತರೊಂದಿಗೆ ಗೌರವಾದರದಿಂದ ವರ್ತಿಸು."

**(ಸುನನ್ ಅಬೀ ದಾಊದ್; ಕಿತಾಬುಲ್ ಅದಬ್, ಬಾಬ್ ಫೀ ಬಿರ್ರುಲ್ ವಾಲಿದೈನ್, ಹದೀಸ್ 5142)**

ಇನ್ನೊಂದು ಸಂದರ್ಭದಲ್ಲಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು:

"ತನಗೆ ದೀರ್ಘಾಯಸ್ಸು ಮತ್ತು ಸಂಪತ್ತು ವರ್ಧನೆ ಉಂಟಾಗಬೇಕು ಎಂದು ಇಚ್ಛಿಸುವವರು ತಮ್ಮ ತಂದೆತಾಯಂದಿರೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸಲಿ ಮತ್ತು ರಕ್ತಸಂಬಂಧಿಗಳೊಂದಿಗೆ ಉತ್ತಮ ಬಾಂಧವ್ಯ ಸ್ಥಾಪಿಸಲಿ."

**(ಅಲ್‌ಜಾಮಿಉಲ್‌ಶುಅ್‌ಬುಲ್ ಈಮಾನ್; ಸಂಪುಟ 10, ಪುಟ 264–265,**
**ಬಾಬ್ ಬಿರ್ರುಲ್ ವಾಲಿದೈನ್, ಹದೀಸ್ 7471)**

ಒಟ್ಟಿನಲ್ಲಿ, ಹೆತ್ತವರ ಮುಂದೆ ಬೇಡಿಕೆಗಳನ್ನು ಇರಿಸುವುದು ಮಾತ್ರ ಮಕ್ಕಳ ಕೆಲಸವಲ್ಲ. ಬದಲಾಗಿ, ಮಕ್ಕಳಿಗೂ ಕೆಲವು ಕರ್ತವ್ಯಗಳಿವೆ ಮತ್ತು ಹೆತ್ತವರು ಈಡೇರಿಸಬೇಕಾದ ಕೆಲವು ಜವಾಬ್ದಾರಿಗಳಿವೆ. ವಿವಾಹದ ನಂತರ ವಿಶೇಷವಾಗಿ ಈ ಕರ್ತವ್ಯಗಳ ಬಗ್ಗೆ ಗಮನಹರಿಸುವುದು ಆವಶ್ಯಕವಾಗಿದೆ. ಪುರುಷನು ತನ್ನ ಪತ್ನಿಯ ಹಕ್ಕುಗಳನ್ನು ಈಡೇರಿಸುತ್ತಾ, ತನ್ನ ತಂದೆ ತಾಯಂದಿರ ಸೇವೆ ಮಾಡುತ್ತಾ, ಪತ್ನಿಗೆ ಅತ್ತೆ ಮಾವಂದಿರ ಮಹತ್ವವನ್ನು ಯುಕ್ತಿಯಿಂದ ತಿಳಿಸುತ್ತಾ ಹಾಗೂ ಸ್ವತಃ ಅತ್ತೆ ಮಾವಂದಿರ ಸೇವೆಯ ಮಹತ್ವ ಅರಿತು ಅವರ ಸೇವೆ ಮಾಡುತ್ತಾ ಇದ್ದರೆ, ಮನೆಯಲ್ಲಿ ಯಾವುದೇ ವಿಧದ ಜಗಳ ಎಂದಿಗೂ ಇರಲಾರದು.

## ಅಹ್ಮದಿಯೇತರ ಮಾತಾಪಿತರೊಂದಿಗೆ ವರ್ತನೆ

ಕೆಲವು ಸಾರಿ ಧಾರ್ಮಿಕ ಭಿನ್ನಾಭಿಪ್ರಾಯದ ಕಾರಣದಿಂದ ತಂದೆ ಮತ್ತು ಮಕ್ಕಳ ನಡುವೆ ತಕರಾರು ತಲೆದೋರುತ್ತದೆ. ಹೊಸದಾಗಿ ಬೈಅತ್ ಮಾಡಿದ ಕೆಲವರು ಇಂತಹ ಪ್ರಶ್ನೆಗಳನ್ನು ಕೇಳುತ್ತಾರೆ. ಈ ಸ್ಥಿತಿಯಲ್ಲಿ ಮಕ್ಕಳು ತನ್ನ ತಂದೆಯೊಂದಿಗೆ ಉತ್ತಮವಾಗಿ ವರ್ತಿಸಬೇಕು ಮತ್ತು ಅವರ ಸೇವೆ ಮಾಡಬೇಕು. ಒಂದು ಯಾತ್ರೆಯ ವೇಳೆ ಹಝ್ರತ್ ಶೇಖ್ ಅಬ್ದುರ್ರಹ್ಮಾನ್ ಸಾಹಿಬರ ತಂದೆಯರ ಸ್ಥಿತಿಗತಿಗಳ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಕೇಳಿದರು. ಅನಂತರ ಅವರಿಗೆ ಹೀಗೆ ಉಪದೇಶಿಸಿದರು:

> "ಅವರಿಗಾಗಿ ದುಆ ಮಾಡಬೇಕು. (ಅವರ ತಂದೆ ಅಹ್ಮದಿಯಾಗಿರಲಿಲ್ಲ) ಎಲ್ಲ ರೀತಿಯಲ್ಲಿ ಮತ್ತು ಸಾಧ್ಯವಾಗುವಷ್ಟು ಮಟ್ಟಿಗೆ ಹೆತ್ತವರಿಗೆ ಸಂತೋಷ ನೀಡಬೇಕು ಮತ್ತು ಮೊದಲಿಗಿಂತ ಸಾವಿರಾರು ಪಟ್ಟು ಹೆಚ್ಚು ಉತ್ತಮ ರೀತಿಯಲ್ಲಿ ವರ್ತಿಸಬೇಕು ಹಾಗು ತನ್ನ ಪರಿಶುದ್ಧ ಮಾದರಿ ತೋರಿಸಿ ಇಸ್ಲಾಮಿನ ಸತ್ಯತೆಯನ್ನು ಮನವರಿಕೆ ಮಾಡಿಕೊಡಬೇಕು. ಸುಸ್ವಭಾವದ ಉತ್ತಮ ಮಾದರಿ ಇತರ ಅನೇಕ ದೃಷ್ಟಾಂತಗಳಿಗಿಂತ ಶ್ರೇಷ್ಠವಾದುದಾಗಿದೆ. ಮನುಷ್ಯನು ಉನ್ನತ ಮಟ್ಟದ ನೈತಿಕ ಗುಣವನ್ನು ಹೊಂದುವುದು ಮತ್ತು ವಿಶಿಷ್ಟವಾದ ವ್ಯಕ್ತಿತ್ವವನ್ನು ಪಡೆಯುವುದು ಯಥಾರ್ಥ ಇಸ್ಲಾಮನ್ನು ಸ್ವೀಕರಿಸಿದವನ ವೈಶಿಷ್ಟ್ಯವಾಗಿರಬೇಕು. ನಿನ್ನ ಮೂಲಕ ಅಲ್ಲಾಹನ ಅವರ ಹೃದಯದಲ್ಲಿ ಇಸ್ಲಾಮಿನೊಂದಿಗೆ ಪ್ರೀತಿಯನ್ನು

ಹುಟ್ಟಿಸಬಹುದು. ಇಸ್ಲಾಮ್ ತಂದೆತಾಯಂದಿರ ಸೇವೆ ಮಾಡುವುದನ್ನು ತಡೆಯುವುದಿಲ್ಲ. ಧರ್ಮಕ್ಕೆ ಅಡ್ಡಿಯುಂಟು ಮಾಡದ ಅವರ ಲೌಕಿಕ ಕಾರ್ಯಗಳನ್ನು ಎಲ್ಲ ರೀತಿಯಲ್ಲಿ ಸಂಪೂರ್ಣ ಅನುಸರಣೆಯಿಂದ ಈಡೇರಿಸಬೇಕು. ಮನಸ್ಸಾರೆ ಅವರ ಸೇವೆ ಮಾಡುತ್ತಿರಬೇಕು.

**(ಮಲ್‌ಫೂರ್‍ಝಾತ್; ಸಂಪುಟ 4, ಪುಟ 175)**

ಇನ್ನೊಂದು ಘಟನೆಯಿದೆ. ಒಬ್ಬ ವ್ಯಕ್ತಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಹೀಗೆ ಕೇಳಿದರು: ಆದರಣೀಯರೇ, ತಂದೆ ತಾಯಂದಿರ ಸೇವೆ ಮಾಡುವುದನ್ನು ಮತ್ತು ಅವರನ್ನು ಅನುಸರಿಸುವುದನ್ನು ಅಲ್ಲಾಹನು ಮನುಷ್ಯನಿಗೆ ಕಡ್ಡಾಯಗೊಳಿಸಿರುವನು. ಆದರೆ ನಾನು ತಮ್ಮನ್ನು ಬೈಅತ್ ಮಾಡಿದ ಕಾರಣದಿಂದ ನನ್ನ ತಂದೆ ತಾಯಂದಿರು ಬಹಳ ಬೇಸರಗೊಂಡಿರುವರು. ಅವರು ನನ್ನ ಮುಖವನ್ನು ಕೂಡ ನೋಡಲು ಇಷ್ಟಪಡುತ್ತಿಲ್ಲ. ನಾನು ತಮ್ಮ ಬಳಿಗೆ ಬೈಅತ್ ಮಾಡಲು ಹೊರಟು ಬರುವಾಗ "ನೀನು ನಮಗೆ ಪತ್ರ ಸಹ ಬರೆಯಬೇಡ. ನಿನ್ನನ್ನು ನೋಡಲು ಸಹ ನಾವು ಇಷ್ಟಪಡುವುದಿಲ್ಲ" ಎಂದು ಹೇಳಿದರು. ಹೀಗಿರುವಾಗ ನಾನು ಅಲ್ಲಾಹನು ಕಡ್ಡಾಯಗೊಳಿಸಿರುವ ಈ ಕರ್ತವ್ಯಗಳಿಂದ ಹೇಗೆ ಬಿಡುಗಡೆ ಪಡೆಯಬಲ್ಲೆನು? (ಮಾತಾಪಿತರ ಸೇವೆ ಮಾಡಬೇಕೆಂದು ಅಲ್ಲಾಹನು ಹೇಳಿದ್ದಾನೆ. ಅವರು ನನ್ನ ಮೂಖವನ್ನು ಕೂಡ ನೋಡಲು ಇಷ್ಟಪಡದಿರುವಾಗ ಮತ್ತು ನನ್ನೊಂದಿಗೆ ಸಂಬಂಧವಿರಿಸಲು ಇಷ್ಟಪಡದಿರುವಾಗ ನಾನು ಹೇಗೆ ಅವರ ಸೇವೆ ಮಾಡಲಿ? ಈ ಕರ್ತವ್ಯವನ್ನು ಹೇಗೆ ಈಡೇರಿಸಲಿ?)

ಇದಕ್ಕೆ ಉತ್ತರವಾಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು:

"ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಮಾತಾಪಿತರನ್ನು ಅನುಸರಿಸಲು ಮತ್ತು ಅವರ ಸೇವೆ ಮಾಡಲು ಆಜ್ಞಾಪಿಸುವುದರೊಂದಿಗೆ ಹೀಗೆಯೂ ಹೇಳಿದ್ದಾನೆ:

رَبُّكُمْ أَعْلَمُ بِمَا فِي نُفُوسِكُمْ ۚ إِن تَكُونُوا صَالِحِينَ فَإِنَّهُ كَانَ لِلْأَوَّابِينَ غَفُورًا

**ರಬ್ಬುಕುಮ್ ಅಅ್‌ಲಮು ಬಿಮಾ ಫೀ ನುಫೂಸಿಕುಮ್. ಇನ್‌ತಕೂನೂ**

**ಸಾಲಿಹೀನ ಫಇನ್ನಹು ಕಾನ ಲಿಲ್‌ಅವ್ವಾಬೀನ ಗ಼ಫೂರ**. ಎಂದರೆ, ನಿಮ್ಮ ಹೃದಯಗಳಲ್ಲಿ ಏನಿದೆ ಎಂದು ಅಲ್ಲಾಹನು ಚೆನ್ನಾಗಿ ಬಲ್ಲನು. ನೀವು ಸಾತ್ವಿಕರಾಗಿದ್ದರೆ ಅಲ್ಲಾಹನು ತನ್ನ ಕಡೆಗೆ ಬಾಗುವವರಿಗೋಸ್ಕರ ಗ಼ಫೂರ್ (ಅತ್ಯಂತ ಕ್ಷಮೆ ನೀಡುವವನು) ಆಗಿದ್ದಾನೆ".

"ಸಹಾಬರಿಗೆ ಸಹ ಇದೇ ರೀತಿಯ ಸಂಕಷ್ಟಮಯ ಪರಿಸ್ಥಿತಿ ಉಂಟಾಗಿತ್ತು. ಧಾರ್ಮಿಕವಾದ ನಿರ್ಬಂಧಿತ ಅವಸ್ಥೆಯ ಕಾರಣದಿಂದ ಅವರಿಗೆ ತಮ್ಮ ತಂದೆ ತಾಯಂದಿರೊಂದಿಗೆ ತಕರಾರು ಇತ್ತು. ಹೇಗಿದ್ದರೂ ನೀವು ನಿಮ್ಮ ತಂದೆ ತಾಯಂದಿರಿಗೆ ನೆಮ್ಮದಿ ನೀಡಲು ಮತ್ತು ಅವರ ಸೇವೆಗೋಸ್ಕರ ಯಾವಾಗಲೂ ಸಿದ್ಧರಾಗಿರಿ. ಸೇವೆಯ ಸಂದರ್ಭ ದೊರೆತರೆ ಆ ಸಂದರ್ಭವನ್ನು ಕಳಕೊಳ್ಳಬೇಡಿರಿ. ನಿಮ್ಮ ಸದುದ್ದೇಶದ ಪುಣ್ಯ ನಿಮಗೆ ದೊರಕುವುದು. ಧರ್ಮಕ್ಕೋಸ್ಕರ ಮತ್ತು ಅಲ್ಲಾಹನ ಸಂಪ್ರೀತಿಗೆ ಆದ್ಯತೆ ಕೊಟ್ಟ ಕಾರಣದಿಂದ ಮಾತಾಪಿತರಿಂದ ಬೇರ್ಪಡಬೇಕಾಗಿ ಬಂದರೆ ಅದೊಂದು ಅನಿವಾರ್ಯ ಸ್ಥಿತಿಯಾಗಿದೆ. ಈ ಸಂಬಂಧವನ್ನು ಸುಧಾರಿಸಲು ಆದಷ್ಟು ಪ್ರಯತ್ನಿಸಿರಿ. ನಿಮ್ಮ ಉದ್ದೇಶ (ನಿಯ್ಯತ್) ಮತ್ತು ಸಂಕಲ್ಪ ಉತ್ತಮವಾಗಿರುವಂತೆ ಗಮನವಹಿಸಿರಿ. ಅವರಿಗೋಸ್ಕರ ಪ್ರಾರ್ಥಿಸುತ್ತಾ ಇರಿ. ಇದು ಹೊಸ ವಿಷಯವೇನಲ್ಲ. ಹಝ್ರತ್ ಇಬ್ರಾಹೀಮ್ ಅಲೈಹಿಸ್ಸಲಾಮರಿಗೆ ಇಂತಹ ಪರಿಸ್ಥಿತಿಯನ್ನು ಎದುರಿಸಬೇಕಾಗಿ ಬಂದಿತ್ತು. ಹೇಗಿದ್ದರೂ ಅಲ್ಲಾಹನಿಗೆ ಸಲ್ಲಿಸಬೇಕಾದ ಹಕ್ಕುಗಳನ್ನು ಮೊದಲು ಈಡೇರಿಸಬೇಕು. ಒಟ್ಟಿನಲ್ಲಿ, ಅಲ್ಲಾಹನಿಗೆ ಆದ್ಯತೆ ಕೊಡಿರಿ, ಮಾತಾಪಿತರ ಹಕ್ಕುಗಳನ್ನು ಈಡೇರಿಸಲು ನಿಮ್ಮಿಂದ ಆಗುವಷ್ಟು ಪ್ರಯತ್ನಿಸಿರಿ."

**(ಮಲ್‌ಫೂಝ್ಞಾತ್; ಸಂಪುಟ 10, ಪುಟ 130 – 131)**

ನಿಮ್ಮ ಉದ್ದೇಶ ಒಳ್ಳೆಯದಾಗಿರಬೇಕು. ಮಾತಾಪಿತರಿಗೆ ಸಂಬಂಧಿಸಿ ಸಹ ಕರ್ತವ್ಯಗಳಿವೆ. ಅವುಗಳನ್ನು ಇಂತಹ ಪರಿಸ್ಥಿತಿಯಲ್ಲಿ ಹೇಗೆ ಈಡೇರಿಸುವುದು ಎಂದು ಈಗಲೂ ಅನೇಕರು ಕೇಳುತ್ತಾರೆ. ಅವರಿಗೆಲ್ಲ ಮೇಲಿನ ಉತ್ತರ ಸಾಕು.

ಒಟ್ಟಿನಲ್ಲಿ, ವಿವಿಧ ನೆಲೆಗಳಲ್ಲಿ ಪುರುಷನಿಗಿರುವ ಹೊಣೆಗಾರಿಕೆಗಳನ್ನು

ಈಡೇರಿಸಲು ಪ್ರಯತ್ನಿಸಬೇಕು. ಮನೆಯಲ್ಲಿ ಯಾವಾಗಲೂ ಪ್ರೀತಿ ಮತ್ತು ಸ್ನೇಹದ ವಾತಾವರಣವಿರುವಂತೆ ನೋಡಬೇಕು. ಒಬ್ಬ ಪುರುಷನು ಪತಿ, ತಂದೆ ಮತ್ತು ಮಗನೂ ಆಗಿರುತ್ತಾನೆ. ಅವನು ಈ ನೆಲೆಗಳಲ್ಲಿ ತನ್ನ ಹೊಣೆಗಾರಿಕೆಗಳನ್ನು ಅರಿತುಕೊಳ್ಳಬೇಕು. ಪುರುಷರಿಗೆ ಇತರ ಅನೇಕ ಸ್ಥಾನಮಾನಗಳು ಸಹ ಇವೆ. ನಾನು ಈಗ ಕೇವಲ ಮೂರರ ಬಗ್ಗೆ ಪ್ರಸ್ತಾಪಿಸಿದ್ದೇನೆ. ಏಕೆಂದರೆ, ಮನೆಯ ಮೂಲ ಘಟಕದಲ್ಲಿ ಶಾಂತಿ ಸ್ಥಾಪಿತವಾದರೆ ಮತ್ತು ಅದರಲ್ಲಿ ಹೆಚ್ಚು ಹೆಚ್ಚು ಸೌಂದರ್ಯವನ್ನು ಉಂಟುಮಾಡಲು ಪ್ರಯತ್ನಿಸಿದರೆ ಮಾತ್ರ ಸಮಾಜದ ಶಾಂತಿಯನ್ನು ಖಾತರಿಪಡಿಸಬಹುದಾಗಿದೆ. ಅಲ್ಲಾಹನು ನಮಗೆಲ್ಲರಿಗೂ ಹೀಗೆ ಮಾಡುವ ಸೌಭಾಗ್ಯ ದಯಪಾಲಿಸಲಿ – **ಆಮೀನ್**.

————————————*****————————————